ಸಂಪುಟ 01 | ಸಂಚಿಕೆ 143 | ಬುಧವಾರ 15 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಪೊಹೆಲಾ ಬೋಯಿಶಾಖ್**

ಬಂಗಾಳಿ ಕ್ಯಾಲೆಂಡರ್‌ನ ಮೊದಲ ದಿನವನ್ನು ಪೊಯಿಲಾ ಬೋಯಿಶಾಖ್ ಎಂದು ಕರೆಯಲಾಗುತ್ತದೆ, ಇದನ್ನು ಹೆಚ್ಚಾಗಿ ಬಾಂಗ್ಲಾ ನೊಬೊಬೋರ್ಷೊ ಎಂದು ಕರೆಯಲಾಗುತ್ತದೆ. ಇದನ್ನು ಬಾಂಗ್ಲಾದೇಶದಲ್ಲಿ ಏಪ್ರಿಲ್ 14 ರಂದು ಮತ್ತು ಭಾರತದ ರಾಜ್ಯಗಳಾದ ಪಶ್ಚಿಮ ಬಂಗಾಳ, ತ್ರಿಪುರ, ಜಾರ್ಖಂಡ್ ಮತ್ತು ಅಸ್ಸಾಂ (ಬರಾಕ್ ಕಣಿವೆ) ಗಳಲ್ಲಿ ಏಪ್ರಿಲ್ 15 ರಂದು ಚಂದ್ರಸೌರ ಕ್ಯಾಲೆಂಡರ್ ಪ್ರಕಾರ ಆಚರಿಸಲಾಗುತ್ತದೆ. ಬಂಗಾಳಿ ವ್ಯವಹಾರ ವರ್ಗವು ತನ್ನ ಹಣಕಾಸು ವರ್ಷವನ್ನು ಸಹ ಈ ದಿನದಂದು ಪ್ರಾರಂಭಿಸುತ್ತದೆ.

**2) ವಿಷು**

ಭಾರತದ ಕೇರಳ, ತುಳುನಾಡು ಮತ್ತು ಮಾಹೆಯ ಕೆಲವು ಭಾಗಗಳಲ್ಲಿ ಹಿಂದೂ ಹೊಸ ವರ್ಷವನ್ನು ಆಚರಿಸುವ ಸಾಂಸ್ಕೃತಿಕ ಹಬ್ಬ ವಿಷು. ಮಲಯಾಳಂ ಸೌರ ಕ್ಯಾಲೆಂಡರ್ ಪ್ರಕಾರ, ಮೇಡಂನ ಮೊದಲ ತಿಂಗಳನ್ನು ವಿಷು ಎಂದು ಕರೆಯಲಾಗುತ್ತದೆ. ಇದನ್ನು ವಾರ್ಷಿಕವಾಗಿ ಏಪ್ರಿಲ್ 15 ರಂದು ಆಚರಿಸಲಾಗುತ್ತದೆ. ಆಶಾವಾದ ಮತ್ತು ಭರವಸೆಯಿಂದ ತುಂಬಿದ ಉತ್ತಮ ಭವಿಷ್ಯಕ್ಕಾಗಿ ಮಲಯಾಳಂ ಹೊಸ ವರ್ಷವನ್ನು ಅಪಾರ ಉತ್ಸಾಹ ಮತ್ತು ವೈಭವದಿಂದ ಆಚರಿಸಲಾಗುತ್ತದೆ.

## ಸುಭಾಷಿತ

ಹತ್ತು ಜನ ಸ್ನೇಹಿತರೊಂದಿಗೆ ಕುಳಿತುಕೊಂಡು
ಒಬ್ಬರ ಬಗ್ಗೆ ಕೆಟ್ಟದ್ದನ್ನು ಮಾತನಾಡುವುದಕ್ಕಿಂತ,
ಒಂಟಿಯಾಗಿ ಕುಳಿತು ಒಂದು ಪುಸ್ತಕವನ್ನು
ಓದುವುದು ಉತ್ತಮವಾದ ಕೆಲಸ.

ಬಿ.ಆರ್.ಅಂಬೇಡ್ಕರ್

# 2026–27ನೇ ಸಾಲಿನ ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಮಾರ್ಗಸೂಚಿ ಪ್ರಕಟ

**ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ 2026–27ನೇ ಸಾಲಿನ ಸಾರ್ವತ್ರಿಕ ವರ್ಗಾವಣೆ ಮಾರ್ಗಸೂಚಿಗಳನ್ನು ಸರ್ಕಾರ ಸೋಮವಾರ ಹೊರಡಿಸಿದ್ದು, ಎಲ್ಲ ವರ್ಗದ ಹುದ್ದೆಗಳಿಗೆ ಅನ್ವಯವಾಗುವಂತೆ ಆಯಾ ವೃಂದಗಳ ಕಾರ್ಯನಿರತ ಬಲದ ಗರಿಷ್ಠ ಶೇ.6ಕ್ಕೆ ಮೀರದಂತೆ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ. ಏ.15 ಬುಧವಾರದಿಂದ ಮೇ 31 ರವರೆಗೆ ಒಂದೂವರೆ ತಿಂಗಳ ಕಾಲ ಸಾರ್ವತ್ರಿಕ ವರ್ಗಾವಣೆ ಕಾಲಾವಧಿ ನಿಗದಿಯಾಗಿದೆ.**

ಎ ಮತ್ತು ಬಿ ವೃಂದದ ಅಧಿಕಾರಿಗಳು ಒಂದೇ ಸ್ಥಳದಲ್ಲಿ 2 ವರ್ಷ, ಸಿ ವರ್ಗದ ಹುದ್ದೆಗಳಲ್ಲಿ 4 ವರ್ಷ ಹಾಗೂ ಡಿ ಗುಂಪಿನಲ್ಲಿ7 ವರ್ಷಗಳ ಸೇವಾವಧಿ



ಪೂರ್ಣಗೊಳಿಸಿದ ನೌಕರರನ್ನು ವರ್ಗಾವಣೆ ಮಾಡಬಹುದಾಗಿದೆ. ಗ್ರೂಪ್ ಎ ಮತ್ತು ಬಿ ವೃಂದದ ಅಧಿಕಾರಿಗಳ ವರ್ಗಾವಣೆ ಅಧಿಕಾರವನ್ನು ಆಯಾ ಇಲಾಖಾ ಸಚಿವರಿಗೆ ನೀಡಲಾಗಿದೆ. ಗ್ರೂಪ್ ಸಿ ಮತ್ತು ಡಿ ವೃಂದದ ನೌಕರರ ವರ್ಗಾವಣೆ ಅಧಿಕಾರವನ್ನು ಆಯಾ ನೇಮಕಾತಿ ಪ್ರಾಧಿಕಾರಗಳಿಗೆ ನೀಡಲಾಗಿದೆ. ಆಡಳಿತಾತಕ ದಕ್ಷತೆ ಮತ್ತು ನೌಕರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ವರ್ಗಾವಣೆ ಮಾರ್ಗಸೂಚಿ ಹೊರಡಿಸಿದ್ದು, ಸಾರ್ವಜನಿಕ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ಸಕ್ಷಮ ಪ್ರಾಧಿಕಾರಗಳು ಪಾರದರ್ಶಕವಾಗಿ ವರ್ಗಾವಣೆ ಪ್ರಕ್ರಿಯೆ ನಿರ್ವಹಿಸಬೇಕು ಎಂದು ಸೂಚಿಸಲಾಗಿದೆ.

ವಿಧಾನಸಭೆ ಉಪ

4ನೇ ಪುಟಕ್ಕೆ

# ಜಾತ್ರೆಗಳಿಂದ ಸಂಬಂಧಗಳು ಗಟ್ಟಿಗೊಳ್ಳುತ್ತವೆ: ನಾವದಗಿ ಶ್ರೀ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಹಿರಿಯರ ಮಾರ್ಗದರ್ಶನ ಮತ್ತು ಪ್ರೀತಿಯ ಕೊರತೆಯಿಂದಾಗಿ ನಮ್ಮಲ್ಲಿ ಸಂಸ್ಕಾರ ಮತ್ತು ಮೌಲ್ಯಗಳು ಕಡಿಮೆಯಾಗುತ್ತಿವೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಾವು ಹೆಚ್ಚು ಸ್ವಾರ್ಥಿಗಳಾಗುತ್ತಿದ್ದೇವೆ ಸೇವಾ ಮನೋಭಾವನೆ ಕಡಿಮೆಯಾಗಿದೆ ಇದರಿಂದಾಗಿ ಸಂಬಂಧಗಳಿಗೆ ಸಾಕಷ್ಟು ಕೊರತೆ ಉಂಟಾಗಿದೆ ಗ್ರಾಮೀಣ ಜಾತ್ರಾ ಮಹೋತ್ಸವ ಪುರಾಣ ಪ್ರವಚನಗಳು ಹಾಗೂ ಧಾರ್ಮಿಕ ಕಾರ್ಯಗಳಿಂದ ಮಾನವೀಯ ಸಂಬಂಧಗಳು ಗಟ್ಟಿಗೊಳ್ಳುತ್ತವೆ ನಮ್ಮ ಈ ಪರಂಪರೆಯನ್ನು ಉಳಿಸಿಕೊಂಡು ಹೋಗುವ ಅಗತ್ಯವಿದೆ ಎಂದು ನಾವದಗಿ ಬ್ರಹನ್ಮಠದ**



**ಷ.ಬ್ರ.ಶ್ರೀ ರಾಜ ಗುರು ರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.**

ತಾಳಿಕೋಟಿ ತಾಲೂಕಿನ ಸುಕ್ಷೇತ್ರ ಶಳ್ಳಗಿ ಗ್ರಾಮದಲ್ಲಿ ಶ್ರೀ ಬಲವಂತರಾಯ ಹಾಗೂ ಶ್ರೀ ಪರಮಣ್ಣ ಮುತ್ಯಾ ಅವರ ಜಾತ್ರೋತ್ಸವ ಅಂಗವಾಗಿ ಹಮ್ಮಿಕೊಂಡ ಪುರಾಣ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಮಹಾನ್ ದಾಸೋಹಿ ಕಲ್ಬುರ್ಗಿ ಶ್ರೀ ಶರಣಬಸವೇಶ್ವರ ಅವರ ಪುರಾಣ ಪ್ರವಚನದಲ್ಲಿ ಇವತ್ತು ಅವರ ವಿವಾಹ ಮಹೋತ್ಸವವನ್ನು ಆಚರಿಸಲಾಗುತ್ತಿದೆ ಶರಣರ ಮಹಾತ್ಮರ ಸಂತರ ಬದುಕು ನಮಗೆ ದಾರಿದೀಪವಾಗಿದೆ ಆ ಮಾರ್ಗದಲ್ಲಿ ನಡೆದು ನಾವು ಅಜ್ಞಾನದ ಕತ್ತಲೆಯಿಂದ ಸುಜ್ಞಾನದ ಬೆಳಕಿನೆಡೆಗೆ ಬಂದು ಜೀವನ ಸಾರ್ಥಕಗಳಿಸಿಕೊಳ್ಳಬಹುದಾಗಿದೆ.

ಎಂದ ಅವರು ಸಣ್ಣ ಸಣ್ಣ ವಿಷಯಗಳಿಗಾಗಿ ಮನಸ್ತಾಪವನ್ನು ಮಾಡಿಕೊಳ್ಳದೆ ಹೃದಯ ವೈಶಾಲ್ಯತೆಯನ್ನು ಬೆಳೆಸಿಕೊಳ್ಳಿ ಒಂದು ದಿನ ನಮಗೆಲ್ಲರಿಗೂ ಈ ಲೋಕವನ್ನು ತ್ಯಜಿಸಬೇಕಾಗಿದೆ ಹೋಗುವಾಗ ನಮ್ಮ ಜೊತೆ ಬರುವುದು ಕೇವಲ ನಮ್ಮ ಒಳ್ಳೆಯ ಕರ್ಮಗಳು ಮಾತ್ರ ಬದುಕಿರುವಷ್ಟು ದಿನ ದ್ವೇಷ ಹಗೆತನವನ್ನು ಬಿಟ್ಟು ಪ್ರೀತಿ ಸಹಬಾಳ್ವೆಯಿಂದ ಬದುಕಲು ಪ್ರಯತ್ನಿಸಿ ಎಂದರು. ಯಾಳಗಿ ಗ್ರಾಮದ ಖ್ಯಾತ ಪುರಾಣಿಕ ವೇದ ಮೂರ್ತಿ ಬಸಯ್ಯ ಸೋಮಶೇಖರಯ್ಯಮಠ ಪುರಾಣ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಪಾರ ಮಹಿಳೆಯರು ಶ್ರೀ ಶರಣಬಸವೇಶ್ವರ ಅವರ ವಿವಾಹ ಮಹೋತ್ಸವವನ್ನು ಎಲ್ಲಾ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸಾಂಕೇತಿಕವಾಗಿ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಗ್ರಾಮದ ಗಣ್ಯರು ಹಿರಿಯರು ಮತ್ತಿತರರು ಇದ್ದರು.

# ಮತದಾನದ ಹಕ್ಕೇ ಸಮಾನತೆಗೆ ಮೂಲಾಧಾರ: ಶಾಂತಗೌಡ ಪಾಟೀಲ ನಡಹಳ್ಳಿ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ದೇಶದಲ್ಲಿ ಹೆಚ್ಚುತ್ತಿರುವ ಜಾತಿ ಭೇದದ ಗೋಡೆಗಳನ್ನು ಕೆಡವಿ, ಎಲ್ಲರೂ ಒಂದೇ ಎಂಬ ಭಾವನೆಯಿಂದ ಬದುಕುವ ಅಗತ್ಯವಿದೆ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳು ನಮ್ಮ ನಿತ್ಯ ಜೀವನದ ಭಾಗವಾಗಬೇಕು ಎಂದು ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಸಿ.ಎಸ್. ನಾಡಗೌಡ ಕರೆ ನೀಡಿದರು.**

ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ತಾಲೂಕು ಆಡಳಿತ ಹಾಗೂ ವಿವಿಧ ದಲಿತ ಪರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. "ಸಂವಿಧಾನವೇ ದೇಶದ ಆತ್ಮ. ಅಂಬೇಡ್ಕರ್ ಅವರ ಆದರ್ಶಗಳು ಪ್ರತಿಯೊಬ್ಬರ ಮನೆಯಲ್ಲಿ ಆಚರಣೆಯಾಗಬೇಕು. ಒಳ ಮೀಸಲಾತಿ ಜಾರಿಯಾಗದ ಹಿನ್ನೆಲೆಯಲ್ಲಿ ಅನೇಕ ಸರ್ಕಾರಿ ಹುದ್ದೆಗಳು ಖಾಲಿ ಉಳಿದಿವೆ. ಈ ಕುರಿತು ಸರ್ಕಾರ



ಗಂಭೀರವಾಗಿ ಪರಿಗಣಿಸಬೇಕಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳು ಸಮಗ್ರ ಚಿಂತನೆ ನಡೆಸಬೇಕು" ಎಂದು ಅವರು ಅಭಿಪ್ರಾಯಪಟ್ಟರು. ಸಮಾಜ ಸೇವಕ ಹಾಗೂ ಕಾಂಗ್ರೆಸ್ ಯುವ ಮುಖಂಡ ಶಾಂತಗೌಡ ಪಾಟೀಲ ನಡಹಳ್ಳಿ ಮಾತನಾಡಿ, "ಒಮ್ಮೆ ಕೆಲ ವರ್ಗಗಳಿಗೆ ಮಾತ್ರ ಸೀಮಿತವಾಗಿದ್ದ ಮತದಾನದ ಹಕ್ಕನ್ನು ಎಲ್ಲರಿಗೂ ನೀಡುವ ಮೂಲಕ ಅಂಬೇಡ್ಕರ್ ಸಮಾನತೆ ಸಾಧಿಸಿದರು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಎಸ್‌ಸಿಪಿ/ ಟಿಎಸ್‌ಪಿ ಯೋಜನೆಯ ಸಾವಿರಾರು ಕೋಟಿ ರೂಪಾಯಿ ದುರ್ಬಳಕೆ ಆಗುತ್ತಿರುವುದು ದುಃಖಕರ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯ ಉಪನ್ಯಾಸಕಿ ಡಾ. ಸುಜಾತಾ ಚಲವಾದಿ ಮಾತನಾಡಿ, "ತಾಯಂದಿರು ದೂರದರ್ಶನಕ್ಕೆ ಸೀಮಿತವಾಗದೆ, ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸಬೇಕು" ಎಂದು ಸಲಹೆ ನೀಡಿದರು. ಮಾಜಿ ಜಿಪಂ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಶಿಕ್ಷಣದ ಮಹತ್ವವನ್ನು ವಿವರಿಸಿದರು. ಈ ವೇಳೆ 'ಮಹಾನ್ ನಾಯಕ' ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಗಿದ್ದು, ಸಾಧಕ ಎಂ.ಕೆ. ಗುಡಿಮನಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಗ್ರಾಮ ಲೆಕ್ಕಾಧಿಕಾರಿ ಗಂಗಾಧರ ಜೂಲಗುಡ್ಡ ಸಂವಿಧಾನ ಪೀಠಿಕೆಯ ಪಠಣ ಮಾಡಿದರು. ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಕೀರ್ತಿ ಚಾಲಕ್, ಇಒ ಸಂಗನಗೌಡ ಬಿರಾದಾರ, ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಸಿಪಿಐ ಮಹಮ್ಮದ್ ಪಸಿವುದ್ದೀನ್, ಬಿಇಒ ಬಿ.ಎಸ್. ಸಾವಳಗಿ ಸೇರಿದಂತೆ ಹಲವು ಇಲಾಖೆಗಳ ಅಧಿಕಾರಿಗಳು, ದಲಿತ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಪತ್ರಕರ್ತ ಪರಶುರಾಮ ಕೊಣ್ಣೂರ ಸ್ವಾಗತಿಸಿದರು. ಶಿಕ್ಷಕ ಟಿ.ಡಿ. ಲಮಾಣಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಆಲ್ ಇಂಡಿಯಾ ಮಜಲಿಸ್–ಎ–ಇತ್ತೆಹಾದುಲ್ ಮುಸ್ಲಿಮೀನ ವತಿಯಿಂದ ಅಂಬೇಡ್ಕರ್ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಆಲ್ ಇಂಡಿಯಾ ಮಜಲಿಸ್–ಎ–ಇತ್ತೆಹಾದುಲ್ ಮುಸ್ಲಿಮೀನ (AIM-IM) ಪಕ್ಷದ ಜನ ಸಂಪರ್ಕ ಕೇಂದ್ರದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಲಾಯಿತು.**

ತಾಲೂಕು ಅಧ್ಯಕ್ಷ ನಾಸಿರ್ ಅಲಿ ಖುರೇಶಿ ಮಾತನಾಡಿ, ಅಂಬೇಡ್ಕರ್ ಅವರು ದೇಶಕ್ಕೆ ನೀಡಿದ ಸಂವಿಧಾನವು ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯದ ಮೂಲವಾಗಿದೆ ಎಂದು ತಿಳಿಸಿದರು. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಗೌರವ ಸೂಚಿಸಲಾಯಿತು.

ಸಮಾಜದ ಹಿತಕ್ಕಾಗಿ ಅವರ ತತ್ವಗಳು ಸದಾ ಮಾರ್ಗದರ್ಶಿಯಾಗಿವೆ




ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಆಸಿಫ್ ಖಾನ್, ಸೈಯದ್ ಅಸಾದ್ ಖಾದ್ರಿ ಸಾಹೇಬ್, ಸೈಯದ್ ರಾಜಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಕಾರುಣ್ಯ ಆಶ್ರಮದಲ್ಲಿ ಡಾ. ಬಿ. ಆರ್.ಅಂಬೇಡ್ಕರ್ ಜಯಂತೋತ್ಸವ ಕಾರ್ಯಕ್ರಮ

## ಸಮಾಜದ ಹಲವಾರು ಅವಮಾನಗಳ ಮಧ್ಯೆ ಅರಳಿದ ಜ್ಯೋತಿ ಡಾ.. ಬಿ.ಆರ್. ಅಂಬೇಡ್ಕರ್ :ಗುರುಲಿಂಗ ಮಹಾಸ್ವಾಮಿಗಳು

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಹಾವೇರಿಯ ಅಗಡಿ ಅಕ್ಕಿಮಠದ ಪರಮ ಪೂಜ್ಯರಾದ ಡಾ. ಗುರುಲಿಂಗ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತೋತ್ಸವ ಕಾರ್ಯಕ್ರಮ ಅರ್ಥಪೂರ್ಣವಾಗಿ ನೆರವೇರಿತು.**

ಈ ಕಾರ್ಯಕ್ರಮದಲ್ಲಿ ಹಾವೇರಿಯ ಅಗಡಿ ಗ್ರಾಮದ ಅಕ್ಕಿಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಡಾ. ಗುರುಲಿಂಗ ಮಹಾಸ್ವಾಮಿಗಳು ಅವರಿಗೆ ಆಶ್ರಮದ ವತಿಯಿಂದ ಗೌರವ ಸಮರ್ಪಣೆ ಮಾಡಿ ಜಗಜ್ಯೋತಿ ಬಸವೇಶ್ವರರ ಭಾವಚಿತ್ರವನ್ನು




ನೆನಪಿನ ಕಾಣಿಕೆಯಾಗಿ ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಡಾ. ಗುರುಲಿಂಗ ಮಹಾಸ್ವಾಮಿಗಳು ಇಂದು ಕಾರುಣ್ಯ ಆಶ್ರಮಕ್ಕೆ ಭೇಟಿ ನೀಡಿದ್ದು ಬಹಳ ಸಂತೋಷವನ್ನುಂಟು ಮಾಡಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಆದರ್ಶ ಆಶಯದಂತೆ ಕಾರುಣ್ಯಾಶ್ರಮದ ಸೇವೆ ಜರುಗುತ್ತಿದೆ.

ಅವರ ಸಮಾನತೆಯ ಹಾದಿಯಲ್ಲಿ ಬೆಂದವರು ಬಂಧುಗಳು ನೊಂದವರು ನಮ್ಮವರು ಎನ್ನುವ ಹಲವಾರು ಸಂದೇಶಗಳನ್ನು ಮೈಗೂಡಿಸಿಕೊಂಡು ಬಡ ಜಂಗಮರಾದ ಹರೇಟನೂರು ಗ್ರಾಮದ ಅಮರಯ್ಯ ಸ್ವಾಮಿಯವರ ಸೇವೆ ಶ್ಲಾಘನೀಯವಾದುದು. ಸಮಾಜದ ಹಲವಾರು ಅವಮಾನಗಳ ಮಧ್ಯೆ ಅರಳಿದ ಜ್ಯೋತಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನದಂತೆ ಈ ಕಾರುಣ್ಯ ಸಂಸ್ಥೆಯು ಕೂಡ ಹಲವಾರು ಅವಮಾನ ಅಪಪ್ರಚಾರ ಟೀಕೆ ಟಿಪ್ಪಣಿಗಳ ಮಧ್ಯೆ ಸತ್ಯ ಪ್ರಾಮಾಣಿಕ ಹಾದಿಯಲ್ಲಿ ಸೇವೆ ಮಾಡುತ್ತಿರುವುದು ಸಮಾಜಕ್ಕೆ ಆದರ್ಶವಾಗಿದೆ.ಪ್ರತಿಯೊಬ್ಬರೂ ಸಹಾಯ ಸಹಕಾರ ಮಾಡಬೇಕು. ಇವತ್ತಿನ ಕಾಲಮಾನದಲ್ಲಿ ಸರ್ಕಾರ ಬರೀ ಸಮುದಾಯಗಳನ್ನು ಕಟ್ಟಿಕೊಟ್ಟು ಅಲ್ಲಿ ಅನೈತಿಕ ಚಟುವಟಿಕೆಗಳನ್ನು ಮಾಡಲು ಅನುಕೂಲ ಮಾಡಿಕೊಡುತ್ತಿದೆ. ಒಮ್ಮೆ ಕಾರುಣ್ಯ ಆಶ್ರಮದ ಬಗ್ಗೆ ಸರ್ಕಾರವು ಗಮನಹರಿಸಿ ಸ್ವಂತ ಜಾಗ ಅನುದಾನ ನೀಡಿದರೆ ಸಮಾಜದಲ್ಲಿ ಇನ್ನೂ ಹೆಚ್ಚಿನ ಜನಪರ ಅನಾಥಪುರ ಸಮಾಜಪರ ಕಾರ್ಯಗಳು ನೆರವೇರುವುದು.

ಮುಂದಿನ ದಿನಮಾನಗಳಲ್ಲಿ ನಮ್ಮ ಅಕ್ಕಿಮಠ ಹಾಗೂ ಹಾವೇರಿಯ ಸಮಸ್ತ ನಾಗರಿಕರ ನಮ್ಮ ಭಕ್ತವೃಂದದವರ ಸಹಾಯ ಸಹಕಾರ ನಿರಂತರವಾಗಿ ಕಾರುಣ್ಯ ಆಶ್ರಮಕ್ಕೆ ದೊರೆಯುತ್ತದೆ ಎಂದು ಆಶೀರ್ವಚನ ನೀಡಿದರು. ಈ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮದ ಸಂಸ್ಥಾಪಕರಾದ ವೇ.ಮೂ. ಅಮರಯ್ಯ ಸ್ವಾಮಿ ಹಿರೇಮಠ. ಹಾಗೂ ಬಸವ ಬಳಗದ ಶರಣರಾದ ಬಸವಲಿಂಗಪ್ಪ ಬಾದರ್ಲಿ. ಶರಣ ಚಂದ್ರು ಹುನಗುಂದ. ಶರಣ ಸಂಗಮೇಶ ಇಲಕಲ್ಲ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮತ್ತು ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತಾ ಮಲದ ಗುಡ್ಡ. ಸಿದ್ದಯ್ಯ ಸ್ವಾಮಿ.ಮರಿಯಪ್ಪ. ಜ್ಯೋತಿ. ಮೀನಾಕ್ಷಮ್ಮ.ಲಕ್ಷ್ಮಿ. ಶರಣು ಸ್ವಾಮಿ.ಬಸವ ಸ್ವಾಮಿ. ಹಾಗೂ ಅನೇಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಪ್ರೀತಿ

ನಿನ್ನ ಕಣ್ಣಲ್ಲಿ ಕಂಡ ಕನಸು
ನನ್ನ ಹೃದಯದಲ್ಲಿ ನೆಲೆಸಿತು,
ನಿನ್ನ ಒಂದು ನಗು ಸಾಕು
ನನ್ನ ದಿನವೇ ಹಬ್ಬವಾಯಿತು.

ನಿನ್ನ ಮಾತಿನ ಮಧುರ ಧ್ವನಿ
ಮನದೊಳಗೆ ಸಂಗೀತವಾಗಿ,
ನಿನ್ನ ನೆನಪಿನ ಪ್ರತಿಕ್ಷಣವೂ
ಜೀವನವೇ ಕವಿತೆಯಾಯಿತು.

ಹತ್ತಿರ ಇರದ ಕ್ಷಣಗಳಲ್ಲೂ
ನಿನ್ನ ಸಾನ್ನಿಧ್ಯ ಅನುಭವಿಸುವೆ,
ಪ್ರೀತಿ ಅಂದ್ರೆ ನೀನೇ ಎಂದು
ನನ್ನ ಮನಸೇ ಹೇಳಿಕೊಳ್ಳುವೆ.

ನೀನು ಜೊತೆ ನಡೆದ ದಾರಿ
ಹೂಗಳಿಂದ ತುಂಬಿದಂತೆ,
ನಿನ್ನ ಪ್ರೀತಿ ಸಿಕ್ಕ ನಂತರ
ಜೀವನವೇ ಸ್ವರ್ಗವಾದಂತೆ

ಸೀಮಾ ಎನ್




1ನೇ ಪುಟದಿಂದ....

ಚುನಾವಣೆ ಕರ್ತವ್ಯದಲ್ಲಿರುವ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಚುನಾವಣೆ ಪ್ರಕ್ರಿಯೆ ಮುಗಿಯುವ ವರೆಗೆ ವರ್ಗಾವಣ ಮಾಡದಂತೆ ಸ್ಪಷ್ಟಪಡಿಸಲಾಗಿದೆ. ಸರ್ಕಾರದ ಮಾರ್ಗಸೂಚಿಯಲ್ಲಿನ ಪ್ರಮುಖ ಸೂಚನೆಗಳು ಏನು?: ವರ್ಗಾವಣೆಯಾದ ನೌಕರರು ಸ್ಥಳ ನಿಯುಕ್ತಿಗಾಗಿ ಕಾಯುವಂತೆ ಮಾಡಿ ಆರ್ಥಿಕ ಹೊರೆಗೆ ಕಾರಣವಾಗಬಾರದು. ಕಡ್ಡಾಯವಾಗಿ ಸ್ಥಳ ನಿಯುಕ್ತಿ ಮಾಡುವುದು.ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಬಾಕಿ ಹಾಗೂ ಗಂಭೀರ ಸ್ವರೂಪದ ಆರೋಪ ಎದುರಿಸುತ್ತಿರುವ ನೌಕರರನ್ನು ನಾನ್ ಎಕ್ಸಿಕ್ಯುಟಿವ್ ಹುದ್ದೆಗಳಿಗೆ ನೇಮಿಸಬೇಕು. ಅವರು ಬಯಸಿದ ಹುದ್ದೆಗೆ ಸ್ಥಳ ನಿಯುಕ್ತಿ ಮಾಡಬಾರದು. ವರ್ಗಾವಣೆಗೊಂಡ ನೌಕರರು ಆಸ್ಪತ್ರೆಯಲ್ಲಿಒಳರೋಗಿಯಾಗಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿರಜೆ ಮಂಜೂರು ಬಗ್ಗೆ ಸಕ್ಷಮ ಪ್ರಾಧಿಕಾರ ದಾಖಲೆಗಳನ್ನು ಪರಿಶೀಲಿಸಿ ನಿರ್ಣಯಿಸಬೇಕು.ಸಚಿವಾಲಯದ ಎ, ಬಿ ಮತ್ತು ಸಿ ವರ್ಗದ ಅಧಿಕಾರಿ, ನೌಕರರು ಒಂದು ಇಲಾಖೆಯಲ್ಲಿ ನಿರ್ವಹಿಸಿದ ಸೇವಾವಧಿಯನ್ನು ಗರಿಷ್ಠ 5 ವರ್ಷಗಳಿಗೆ ಪರಿಗಣಿಸಬೇಕು. ಕಲ್ಯಾಣ ಕರ್ನಾಟಕ ಭಾಗದ ಕಚೇರಿಗಳಿಗೆ ನೇಮಕ ಹೊಂದಿದವರನ್ನು ಕನಿಷ್ಠ 10 ವರ್ಷಗಳವರೆಗೆ ಈ ಪ್ರದೇಶದಿಂದ ಹೊರಗೆ ವರ್ಗಾವಣೆ ಮಾಡಬಾರದು. ವಿಶೇಷ ಪ್ರಕರಣ, ವಿನಾಯಿತಿ ಏನು: ಒಂದು ಸ್ಥಳದಲ್ಲಿ ಕನಿಷ್ಠ ಅವಧಿ ಪೂರ್ಣಗೊಳಿಸಿ ವರ್ಗಾವಣೆಗೆ ಅರ್ಹರಾಗಿರುವ ಸರ್ಕಾರಿ ನೌಕರ ನಿವೃತ್ತಿಗೆ 2 ವರ್ಷಕ್ಕಿಂತ ಕಡಿಮೆ ಸೇವಾವಧಿ ಹೊಂದಿದ್ದರೆ ವಿನಾಯಿತಿ. ಪತಿ–ಪತ್ನಿ ಪ್ರಕರಣಗಳಲ್ಲಿ ಒಬ್ಬರು ವರ್ಗಾವಣೆಯಾದಲ್ಲಿ ಮತ್ತೊಬ್ಬರು ಕನಿಷ್ಠ ಸೇವಾವಧಿ ಪೂರೈಸದಿದ್ದರೂ ಖಾಲಿ ಹುದ್ದೆ ಲಭ್ಯತೆ ಆಧರಿಸಿ ಅದೇ ಸ್ಥಳ ಅಥವಾ ಹತ್ತಿರದ ಸ್ಥಳಕ್ಕೆ ವರ್ಗಾಯಿಸಬಹುದು. ವಿಶೇಷ ತಾಂತ್ರಿಕ ವಿದ್ಯಾರ್ಹತೆ ಮತ್ತು ಅನುಭವ ಹೊಂದಿದ್ದು, ಆ ಹುದ್ದೆಗೆ ನೇಮಕಕ್ಕೆ ಬದಲಿ ನೌಕರ ಲಭ್ಯವಿಲ್ಲದಿದ್ದಲ್ಲಿ ವರ್ಗಾವಣೆಯಿಂದ ವಿನಾಯಿತಿ.ನೌಕರರ ಪತಿ, ಪತ್ನಿ ಅಥವಾ ಅವಲಂಬಿತ ಮಕ್ಕಳು ಗಂಭೀರ ಕಾಯಿಲೆಗೆ ತುತ್ತಾಗಿದ್ದು, ಚಿಕಿತ್ಸೆಲಭ್ಯವಿರುವ ಸ್ಥಳಕ್ಕೆ ವೈದ್ಯ ಮಂಡಳಿ ಪ್ರಮಾಣಪತ್ರ ಸಲ್ಲಿಸಿದರೆ ಪರಿಗಣಿಸಬಹುದು. ಅವಿವಾಹಿತೆ, ವಿಧವೆ, ವಿಚ್ಛೇದಿತ ಮಹಿಳಾ ನೌಕರರಿಗೆ ಹುದ್ದೆಯ ಲಭ್ಯತೆ ಆಧರಿಸಿ ಆಕೆ ಕೋರಿದ ಸ್ಥಳಕ್ಕೆ ವರ್ಗಾಯಿಸಬಹುದು.

# ಮಾನ್ವಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ 135ನೇ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಮಾನ್ವಿ ನಗರದಲ್ಲಿ ಭಕ್ತಿಭಾವ ಹಾಗೂ ಸಂಭ್ರಮದ ವಾತಾವರಣದಲ್ಲಿ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಬಾಬಾಸಾಹೇಬರ ವೃತ್ತದಲ್ಲಿ ಆಯೋಜಿಸಲಾದ ಮೆರವಣಿಗೆಗೆ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ ಹಂಪಯ್ಯ ನಾಯಕ್ ಚಾಲನೆ ನೀಡಿದರು.**

ನಗರದ ಪ್ರಮುಖ ರಸ್ತೆಗಳಲ್ಲಿ ಅಂಬೇಡ್ಕರ್ ಭಾವಚಿತ್ರಗಳೊಂದಿಗೆ, ಘೋಷಣೆಗಳು ಮತ್ತು ಬ್ಯಾಂಡ್ ವಾದ್ಯಗಳ ನಡುವೆ ನಡೆದ ಮೆರವಣಿಗೆಗೆ ಅಪಾರ ಜನಸ್ತೋಮ ಸಾಕ್ಷಿಯಾಯಿತು. ಬಳಿಕ ನಡೆದ ವೇದಿಕೆ ಕಾರ್ಯಕ್ರಮವನ್ನು ಶಾಸಕರು ಉದ್ಘಾಟಿಸಿ ಮಾತನಾಡಿದರು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶಕ್ಕೆ ನೀಡಿದ ಸಂವಿಧಾನವು ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯದ



ಮೌಲ್ಯಗಳನ್ನು ಪ್ರತಿಬಿಂಬಿಸುವ ಮಹಾನ್ ದಸ್ತಾವೇಜು ಎಂದು ಅವರು ಹೇಳಿದರು.

ಸಮಾಜದ ಪ್ರತಿಯೊಬ್ಬರೂ ಸಮಾನ ಅವಕಾಶಗಳನ್ನು ಪಡೆಯುವಂತಹ ವ್ಯವಸ್ಥೆಯನ್ನು ನಿರ್ಮಿಸುವುದು ಅಂಬೇಡ್ಕರ್ ಅವರ ಕನಸಾಗಿತ್ತು ಎಂದು ತಿಳಿಸಿದರು. ಸಮಾಜದ ಹಿಂದುಳಿದ, ನೊಂದ ಹಾಗೂ ಶೋಷಿತ ವರ್ಗಗಳ ಅಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಸಾಧನವಾಗಿದ್ದು, ಯುವಜನತೆ ಅಂಬೇಡ್ಕರ್ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಇತಿಹಾಸವನ್ನು ಅರಿತುಕೊಂಡಾಗ ಮಾತ್ರ ಉತ್ತಮ ಭವಿಷ್ಯ ನಿರ್ಮಾಣ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ವಿವಿಧ ಸಂಘಟನೆಗಳ ಮುಖಂಡರು, ಜನಪ್ರತಿನಿಧಿಗಳು, ತಾಲೂಕು ಮಟ್ಟದ ಅಧಿಕಾರಿಗಳು, ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಂಬೇಡ್ಕರ್ ಅವರಿಗೆ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಗ್ಯಾರಂಟಿಗಳ ಅಧ್ಯಕ್ಷ ಬಿ.ಕೆ. ಅಮರೇಶಪ್ಪ ವಕೀಲರು, ಮಾಜಿ ಶಾಸಕರಾದ ರಾಜ ವೆಂಕಟಪ್ಪ ನಾಯಕ್, ಗುಡದಿನ್ನಿ ಶರಣಯ್ಯ ನಾಯಕ್, ಶಿವರಾಜ್ ನಾಯಕ ವಕೀಲರು, ಸೈಯದ್ ನಜರುದ್ದೀನ್ ಖಾದ್ರಿ, ರೌಡ್ರು ಮಹಾಂತೇಶ್ ಸ್ವಾಮಿ, ಗುಮ್ಮ ಬಸವರಾಜ್ ವಕೀಲರು, ಗೋಪಾಲ್ ನಾಯಕ್, ಜಿ. ನಾಗರಾಜ್, ಸೈಯದ್ ಖಾಲಿದ್ ಖಾದ್ರಿ, ರಾಜ ಸುಭಾಷ್ ಚಂದ್ರ ನಾಯಕ್, ಚಾಂದ್ ಪಾಶಾ ಗುತ್ತೇದಾರ್, ಜಯಪ್ರಕಾಶ್, ಶಿವರಾಜ್ ಉಮಳಿ ಹೊಸೂರು, ಸತ್ತರ ಬಂಗ್ಲೆವಾಲೆ, ಎಂ.ಡಿ. ಮಹೆಮ್ಮದ್, ಅಬ್ಬು ಪಟೇಲ್, ಕಾಮೇಶ್ ಮದುಕಲ್, ಹಂಪಯ್ಯ ನಾಯಕ್, ಶಂಕರ್ ಜಗ್ಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಅಂಬೇಡ್ಕರ್ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು–ಕಿರಿಲಿಂಗಪ್ಪ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಡಾ.ಬಾಬಾ ಸಾಹೇಬ್ ಅಂಬೇಡ್ಕ್ರ ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ಇಂದಿನ ಯುವ ಪೀಳಿಗೆ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕಾಗಿದೆ' ಎಂದು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕಿರಿಲಿಂಗಪ್ಪ ಅವರು ಹೇಳಿದರು. ಅವರು ಇಂದು ಪಟ್ಟಣ ಪಂಚಾಯತಿಯಲ್ಲಿ ಹಮ್ಮಿಕೊಂಡಿದ್ದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿಯಲ್ಲಿ ಭಾಗವಹಿಸಿ ಮಾತನಾಡಿದರು.**

ಬಾಬಾ ಸಾಹೇಬರು ಸೋಶಿತ ವರ್ಗದ ಏಳಿಗೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟು ಭಾರತದ ಸಂವಿಧಾನ ರೂಪಿಸುವ ಜವಾಬ್ದಾ–



ರಿಯನ್ನು ಹೊತ್ತು ಅಪಾರ ಶ್ರಮವಹಿಸಿ ದೇಶಕ್ಕೆ ಸಂವಿಧಾನವನ್ನು ಕಟ್ಟಿಕೊಟ್ಟರು, ಭಾರತ ಆಡಳಿತಕ್ಕೆ ಸಂವಿಧಾನವನ್ನು ನೀಡಿದ ಮಹಾತ್ಮರು ಇವರಾಗಿದ್ದು, ಇವರು ಕೊಟ್ಟಿರುವ ಸಂವಿಧಾನದ ಮಾರ್ಗದಲ್ಲಿ ನಾವುಗಳು ನಡೆಯುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕಾಗಿದೆ' ಎಂದರು. ಪಟ್ಟಣ ಪಂಚಾಯತಿ ಅಧ್ಯಕ್ಷೆ ರಾಜೇಶ್ವರಿ ತಿಪ್ಪಯ್ಯಸ್ವಾಮಿ, ಉಪಾಧ್ಯಕ್ಷೆ ಯಲಿಜ ಓವಣ್ಣ ಕಡತಲ್ ಬಾಬಾ ಸಾಹೇಬರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಪಿಎಸ್ಐ ಗುರುಚಂದ್ರ ಯಾದವ್, ಪಟ್ಟಣ ಪಂಚಾಯತ್ ಸದಸ್ಯರಾದ ಅಮರೇಶ ಕಟ್ಟಿಮನಿ, ಮಲ್ಲಿಕಾರ್ಜುನಗೌಡ, ಲಿಂಗರಾಜ್ ಕಂದಗಲ್, ಯಲ್ಲಪ್ಪ ಮಾಡಗಿರಿ, ದಲಿತ ಸಾಹಿತಿ ಜಂಬಣ್ಣ, ಮುಖಂಡರಾದ ಬಸವರಾಜ್ ಕವಿತಾಳ, ಈರಣ್ಣ ಕೆಳಗೇರಿ, ಹನುಮಂತ ಬುಳ್ಳಾಪುರ, ಯಮನಪ್ಪ ದಿನ್ನಿ, ತಿಪ್ಪಯ್ಯಸ್ವಾಮಿ, ಚಾಂದಪಾಷಾ, ಸುರೇಶ್ ರಡ್ಡಿ, ಅಯ್ಯಪ್ಪ ನಿಲೋಗಲ್,ಯಾಕುಬ್, ರಫಿ ಒಂಟಿಬಂಡಿ ಸೇರಿದಂತೆ ಇನ್ನಿತರ ಮುಖಂಡರು ಹಾಗೂ ಪಟ್ಟಣ ಪಂಚಾಯತಿ ಸಿಬ್ಬಂದಿಗಳು ಉಪಸ್ಥಿತರಿದ್ದರು. ಪಟ್ಟಣದ ಎಲ್ಲಾ ಸರ್ಕಾರಿ ಕಛೇರಿಗಳು, ಶಾಲೆಗಳು ಸೇರಿದಂತೆ ಖಾಸಗಿ ಶಾಲಾ, ಸಂಘ ಸಂಸ್ಥೆಗಳಲ್ಲಿ ಅಂಬೇಡ್ಕರ್ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

# ಅಭಿವೃದ್ಧಿಯ ಹಾದಿಯಲ್ಲಿ ಸಿಂಧನೂರು ರಸ್ತೆ ನಿರ್ಮಾಣಕ್ಕೆ ಭರ್ಜರಿ ಚಾಲನೆ





ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆ ಇಡಲಾಗಿದ್ದು, ಲೋಕೋಪಯೋಗಿ ಇಲಾಖೆಯ ಅನುದಾನದಡಿ ಬಹುಕಾಲದ ರಸ್ತೆ ಸಮಸ್ಯೆಗೆ ಪರಿಹಾರ ಸಿಗುವಂತೆ ಡಾಂಬರೀಕರಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ.**

ಅರಗಿನಮರ ಕ್ಯಾಂಪಿನಿಂದ ಆರ್. ಎಚ್. ನಂ 1ರವರೆಗೆ ರೂ.3.80 ಕೋಟಿ ವೆಚ್ಚದಲ್ಲಿ ಹಾಗೂ ಆರ್.ಎಚ್. ನಂ 1ರಿಂದ ಈರಣ್ಣ ಕ್ಯಾಂಪಿನವರೆಗೆ ರೂ.2.40 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಶಾಸಕ ಹಂಪನಗೌಡ ಬಾದರ್ಲಿ ಅವರ ಅನುಪಸ್ಥಿತಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ (SUDA) ಅಧ್ಯಕ್ಷ ಬಾಬುಗೌಡ ಬಾದರ್ಲಿ ಅವರು ಕಾಮಗಾರಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳ ರಸ್ತೆ ಅಭಿವೃದ್ಧಿ ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಜನರ ಸಂಚಾರ ಸುಗಮಗೊಳಿಸುವುದು ಹಾಗೂ ರೈತರ ಕೃಷಿ ಉತ್ಪನ್ನಗಳ ಸಾಗಾಟಕ್ಕೆ ಅನುಕೂಲ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ತಿಳಿಸಿದರು.

ರಸ್ತೆ ಅಭಿವೃದ್ಧಿಯಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು, ರೈತರು, ವ್ಯಾಪಾರಸ್ಥರು ಹಾಗೂ ಸಾರ್ವಜನಿಕರಿಗೆ ಬಹಳ ಪ್ರಯೋಜನವಾಗಲಿದೆ. ಮಳೆಗಾಲದಲ್ಲಿ ಉಂಟಾಗುತ್ತಿದ್ದ ಸಂಚಾರ ತೊಂದರೆಗಳಿಗೆ ಶಾಶ್ವತ ಪರಿಹಾರ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಲಾಯಿತು. ಶಾಸಕ ಹಂಪನಗೌಡ ಬಾದರ್ಲಿ ಅವರ ನೇತೃತ್ವದಲ್ಲಿ ತಾಲೂಕಿನಲ್ಲಿ ನಿರಂತರ ಅಭಿವೃದ್ಧಿ ಕಾಮಗಾ–ರಿಗಳು ನಡೆಯುತ್ತಿದ್ದು, ಮೂಲಸೌಕರ್ಯ ವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ಸ್ಥಳೀಯ ಮುಖಂಡರು ಹೇಳಿದರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು, ವಿವಿಧ ಸಂಘಟನೆಗಳ ಮುಖಂಡರು, ಸಾರ್ವಜನಿಕರು ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಸನ್ ರೈಸ್ ಶಿಕ್ಷಣ ಸಂಸ್ಥೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಭಾರತದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಅತ್ಯಂತ ಭಕ್ತಿ ಭಾವದಿಂದ ಹಾಗೂ ಗೌರವಪೂರ್ಣವಾಗಿ ಆಚ–ರಿಸಲಾಯಿತು.ಕಾರ್ಯಕ್ರಮವನ್ನು ಡಾ. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಪ್ರಾರಂಭಿಸಲಾಯಿತು.**



ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಇರ್ಷಾದ್ ಕೆ ಅವರು ಡಾ. ಅಂಬೇಡ್ಕರ್ ಅವರ ಜೀವನ ಸಾಧನೆ, ಸಮಾಜದ ಮೇಲಿನ ಅವರ ಅಪಾರ ಕೊಡುಗೆ ಹಾಗೂ ಸಂವಿಧಾನ ರಚನೆಯಲ್ಲಿ ಅವರ ಮಹತ್ವದ ಪಾತ್ರವನ್ನು ವಿವರವಾಗಿ ಪ್ರಸ್ತಾಪಿಸಿದರು. ಹಾಗೂ ನರ್ಸಿಂಗ್ ಪ್ರಾಚಾರ್ಯ ಲಾಜರ್ ಸಿರಿಲ್ ಮಾತನಾಡಿ, ಡಾ. ಅಂಬೇಡ್ಕರ್ ಅವರು ಕೇವಲ ಸಂವಿಧಾನ ಶಿಲ್ಪಿಯಾಗಿಯೇ ಅಲ್ಲದೆ, ಸಮಾಜದ ಅಸಮಾನತೆಗಳನ್ನು ನಿವಾರಿಸಲು ಹೋರಾಡಿದ ಮಹಾನ್ ಚಿಂತಕರಾಗಿದ್ದಾರೆ ಎಂದು ಹೇಳಿದರು.

ಶಿಕ್ಷಣವೇ ಸಮಾನತೆಯ ದಾರಿ ಎಂದು ಸಾರಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿಯೂ ಅಂಬೇಡ್ಕರ್ ಅವರ ಆದ–ರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ, ಅಂಬೇಡ್ಕರ್ ಅವರ ತತ್ವಗಳನ್ನು ಸ್ಮ–ರಿಸಿದರು. ಕಾರ್ಯಕ್ರಮವು ಶಿಸ್ತಿನೊಂದಿಗೆ ಹಾಗೂ ಅರ್ಥಪೂರ್ಣವಾಗಿ ನಡೆಯಿತು.

# ಜಾಲಹಳ್ಳಿಯಲ್ಲಿ ಅದ್ದೂರಿಯಾಗಿ ಡಾ. ಬಿ ಆರ್ ಅಂಬೇಡ್ಕರ್ ಅವರ 135 ನೇ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಗ್ರಾಮದಲ್ಲಿ ಇಂದು (14–04–2026) ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು. ಜಾಲಹಳ್ಳಿಯ ಅಂಬೇಡ್ಕರ್ ವೃತ್ತದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಿವಿಧ ದಲಿತ ಸಂಘಟನೆಗಳು ಒಂದಾಗಿ ಸೇರಿ ಗೌರವ ಸಮರ್ಪಿಸಿದವು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ದಲಿತ ಮುಖಂಡ ಎನ್. ಲಿಂಗಪ್ಪ ಅವರು, ಅಂಬೇಡ್ಕರ್ ಅವರ ಜಯಂತಿ ಭಾರತ ಮಾತ್ರವಲ್ಲದೆ ಜಗತ್ತಿನಾದ್ಯಂತ ಆಚರಣೆ ಆಗುತ್ತಿರುವುದು ಅವರ ಮಹತ್ವವನ್ನು ತೋರಿಸುತ್ತದೆ ಎಂದರು.**

ಈ ಸಂದರ್ಭದಲ್ಲಿ ವಕೀಲ ವೇಣುಗೋಪಾಲ್ ನಾಯಕ್ ಮಾತನಾಡಿ, ಅಂಬೇಡ್ಕರ್ ಅವರ ಆದರ್ಶ ಮತ್ತು ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಹಾಗೂ ಸಂವಿಧಾನದ ರಕ್ಷಣೆ ಪ್ರತಿಯೊಬ್ಬ



ನಾಗರಿಕನ ಕರ್ತವ್ಯ ಎಂದು ಹೇಳಿದರು. ಜಾಲಹಳ್ಳಿ ಸಮುದಾಯ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿ ಡಾ. ಆರ್.ಎಸ್. ಹುಲಿಮನಿ ಗೌಡ್ರು ಮಾತನಾಡಿ, ಸಮಾಜದಲ್ಲಿ ಅಸ್ಪೃಶ್ಯತೆ ಮತ್ತು ಅಸಮಾನತೆಯನ್ನು ನಿವಾರಿಸಲು ಅಂಬೇಡ್ಕರ್ ಅವರ ಪಾತ್ರ ಅತ್ಯಂತ ಮಹತ್ವದ್ದು ಎಂದು ತಿಳಿಸಿದರು. ಭಾರತ ರತ್ನ ಪ್ರಶಸ್ತಿ ಪಡೆದ ಮೊದಲ ಮಹಾನ್ ವ್ಯಕ್ತಿಗಳಲ್ಲಿ ಅಂಬೇಡ್ಕರ್ ಪ್ರಮುಖರು ಎಂದರು. ಸಮಾಜ ಸೇವಕ ಸಾಬಣ್ಣ ಕಮಲದಿನ್ನಿ ಅವರು ಮಾತನಾಡಿ, ಜಾತಿ ಭೇದವನ್ನು ಮರೆತು ಸಮಾನತೆಯ ಸಂದೇಶವನ್ನು ಸಾರುವ ಮೂಲಕ ಅಂಬೇಡ್ಕರ್ ಜಯಂತಿಯನ್ನು ಆಚರಿಸುತ್ತಿದ್ದೇವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ತಾಲೂಕು ಆಡಳಿತದಿಂದ ಸಮಾಜ ಸೇವೆಗೆ ಉತ್ತಮ ಪ್ರಶಸ್ತಿ ಪಡೆದ ಸಾಬಣ್ಣ ಕಮಲದಿನ್ನಿ ಅವರನ್ನು ಎಲ್ಲಾ ದಲಿತ ಸಂಘಟನೆಗಳು ಸೇರಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ವೆಂಕೋಬ ತೋಟದ, ಉಪಾಧ್ಯಕ್ಷರಾದ ವೀರೇಶ್ ಅರಕೇರಿ ಜಾಲಹಳ್ಳಿ ಪಿಎಸ್ಐ ಆಗಿರುವ ವೈಶಾಲಿ ಜಳಕಿ ಬಸವರಾಜ್ ಪಂಪಾಪತಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು, ಶ್ರೀ ವೇಣುಗೋಪಾಲ್ ನಾಯಕ್ ವಕೀಲರು, ರಾಜ ವಾಸುದೇವ ನಾಯಕ ವಕೀಲರು, ಶ್ರೀ ಮೌನೇಶ್ ದೇಸಾಯಿ, ಬಾಬಾ ಮೆಡಿಕಲ್, ಬಸವರಾಜ್ ಪಾಣಿ ನಸಿರುದ್ದೀನ್ ಮುಲ್ಲಾ, ಹೈದರ್ ಸಾಬ್ ಮುಲ್ಲಾ, ಇಬ್ರಾಹಿಂ ಯಾದ್ಗೀರ್ ಅಮರೇಗೌಡ ಕಮಲದಿನ್ನಿ, ಶರಣಗೌಡ ಕಂಬಲದಿನ್ನಿ, ಭೀಮಣ್ಣ ಗುಮ್ದಾರ್, ಗಿರಿಯಪ್ಪ ಪೂಜಾರಿ ಪತ್ರಕರ್ತರು ಮೌನೇಶ್ ಪತ್ರಕರ್ತರು ಮಹಾಲಿಂಗ ಪತ್ರಕರ್ತರು ಚೆನ್ನಪ್ಪ ಪತ್ರಕರ್ತರು ಇಮಾಮ್ ಸಾಬ್,

ಲಿಂಗಣ್ಣ ಮಕಾಶಿ ನಂದಪ್ಪ, ತಮ್ಮಣ್ಣ ಹೇರುಂಡಿ, ರಂಗಪ್ಪ ಬಂಡಿ ಹಾಗೂ ಗ್ರಾಮ ಪಂಚಾಯತ್ ಸದಸ್ಯರಾದ ಮಕ್ತುಂಮ ಪರಾಶಿ, ಕುಮಾರ್, ಅಬ್ದುಲ್ ರೆಹಮಾನ್ ಖುರೇಷಿ, ಸಲ ಬಣ್ಣ ಹಂಪರಗುಂದಿ, ರಮೇಶ್ ತೆಗ್ಗಳ್ಳಿ ಹಾಗೂ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರ ಗೋವಿಂದಪ್ಪ ಹಲಗೇರಿ ಉಪಾಧ್ಯಕ್ಷರಾದ ಖುರ್ಷಿದ್ ಪಟೇಲ್ ಸದಸ್ಯರಾದ ವೆಂಕುಬ ಪೂಜಾರಿ, ಈಶಣ್ಣ ಕಾಟಮಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಎಲ್ಲಾ ಸದಸ್ಯರು ಭಾಗವಹಿಸಿದ್ದರು ಹಾಗೂ ದಲಿತ ಸಮಿತಿ ಮುಖಂಡರಾದ ಎನ್ ಲಿಂಗಪ್ಪ, ಸಾಬಣ್ಣ ಕಮಲದಿನ್ನಿ, ಬಾಳಪ್ಪ ಬಾವಿಮನಿ, ಹುಸೇನಪ್ಪ ಗುತ್ತೇದಾರ್, ಭೂತಪ್ಪ ದೇವರಮನಿ ಚಂದಪ್ಪ ಬಾವಿಮನಿ,ರಮೇಶ್ ಬಾಗೂರ್, ಶಿವಪ್ಪ ಮ್ಯಾಗೇರಿ,

ಭೀಮಣ್ಣ ದಲಿತ ಯುವ ಮುಖಂಡ ರಾದ ವೆಂಕಟೇಶ್ ಮುಷ್ಟಳ್ಳಿ ಹೋಬಳಿ ಘಟಕದ ಅಧ್ಯಕ್ಷರಾದ ರಮೇಶ್ ಬಾವಿಮನಿ ರಾಮಣ್ಣ ಜಿಡಿ ರಮೇಶ್ ಗಾಜನದಿನ್ನಿ ಕುಮಾರ್ ಗ್ರಾಮ ಪಂಚಾಯತ್ ಸದಸ್ಯರು ಮೌನೇಶ್ ಯಲಗಟ್ಟಿ ಮುದುರಂಗಪ್ಪ ಮ್ಯಾಗೇರಿ ಮೌನೇಶ್ ಚಪ್ಪಳಕಿ ಶಿವ ಚಪ್ಪಳಕಿ ರಮೇಶ್ ಬಾಗುರ್. ವಿವಿಧ ಸಂಘಟನೆಗಳ ಮುಖಂಡರು ಯುವಕರು ಭಾಗವಹಿಸಿದರು ಹಾಗೆಯೇ ದಲಿತ ಸಮಿತಿ ಮುಖಂಡರು, ಯುವಕರು ಹಾಗೂ ನೂರಾರು ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಂಬೇಡ್ಕರ್ ಅವರ ಸ್ಮರಣೆಯನ್ನು ಗೌರವಿಸಿದರು.

# ನೇಮಕಾತಿ ಪ್ರಕಟಣೆ

RRI ನೇಮಕಾತಿ 2026–3 ಸಂಶೋಧನಾ ಸಹಾಯಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಖಖಖ ನೇಮಕಾತಿ 2026: 3 ಸಂಶೋಧನಾ ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಮನ್ ಸಂಶೋಧನಾ ಸಂಸ್ಥೆಯು ಏಪ್ರಿಲ್ 2026 ರ ಖಖಖ ಅಧಿಕೃತ ಅಧಿಸೂಚನೆಯ ಮೂಲಕ ಸಂಶೋಧನಾ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 10–ಮೇ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 09–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10–ಮೇ–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು: ಇಲ್ಲಿ ಕ್ಲಿಕ್ ಮಾಡಿ ಅಧಿಕೃತ ವೆಬ್‌ಸೈಟ್: rri.res.in

# ಜವಳಗೇರಾ ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ 135ನೇ ಜಯಂತಿ ಅಂಗವಾಗಿ ಭವ್ಯ ಸನ್ಮಾನ ಸಮಾರಂಭ



ನೈಜ್ಯ ದೆಸೆ ನ್ಯೂಸ್

**ಜವಳಗೇರಾ: ಗ್ರಾಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಅತ್ಯಂತ ಗೌರವ ಮತ್ತು ಉತ್ಸಾಹದೊಂದಿಗೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗಗಳಲ್ಲಿ 80% ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಒಟ್ಟು 22 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮವು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಆರಂಭಗೊಂಡಿತು. ನಂತರ ಅತಿಥಿಗಳು ಅಂಬೇಡ್ಕರ್ ಅವರ ಜೀವನ ಮೌಲ್ಯಗಳು, ಶಿಕ್ಷಣದ ಮಹತ್ವ ಹಾಗೂ ಸಮಾನತೆಯ ತತ್ವಗಳ ಬಗ್ಗೆ ಪ್ರೇರಣಾದಾಯಕ ಮಾತುಗಳನ್ನು ಹಂಚಿಕೊಂಡರು. ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ಸಮಾಜದಲ್ಲಿ ಬದಲಾವಣೆ ತರಬೇಕು ಎಂದು ಕರೆ ನೀಡಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾದಿಗ ಸಮಾಜದ ಮುಖಂಡರಾದ ಆರ್. ಅಂಬ್ರೂಸ್ ಅವರು ವಹಿಸಿಕೊಂಡು ಮಾತನಾಡಿ, "ಶಿಕ್ಷಣವೇ ನಮ್ಮ ಸಮುದಾಯದ ಶಕ್ತಿ. ಇಂತಹ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಅತ್ಯಂತ ಅಗತ್ಯ" ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಬಸವರಾಜ್ ನಾಡಗೌಡರು ತಮ್ಮ ಭಾಷಣದಲ್ಲಿ, ವಿದ್ಯಾರ್ಥಿಗಳು ಕೇವಲ ಅಂಕಗಳಲ್ಲದೇ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಾಜಿ ನಗರಸಭೆ ಅಧ್ಯಕ್ಷರಾದ ಸುಭಾಷ್ ಫ್ರಾಂಕ್ಲಿನ್ ಅವರು ಸಮಾಜದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಮಹತ್ತರವೆಂದು ತಿಳಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ಯುವಕ ಮಂಡಳಿಯ ಮಾಜಿ ಅಧ್ಯಕ್ಷರಾದ ಅಂಬಣ್ಣ ಅವರು ಮಾತನಾಡಿ, "ಅಂಬೇಡ್ಕರ್ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು" ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಯಮುನೂರಪ್ಪ (ಆರೋಗ್ಯಪ್ಪ ರಂಗಪ್ಪ), ಜಾನಪ್ಪ ದೊಡ್ಡಮನಿ, ಅಯ್ಯಪ್ಪ ದೊಡ್ಡಮನಿ, ರಮೇಶ್ ಮಾಸ್ಟರ್, ದುರ್ಗಪ್ಪ ವಕೀಲರು, ಪ್ರಸಾದ್, ಪುನೀತ್, ಸಂತೋಷ್, ನಾಗರಾಜ್, ಪುನ, ಹನುಮಂತ, ಲಂಕೇಶ್ ಸೇರಿದಂತೆ ಅನೇಕ ಗಣ್ಯರು ಹಾಗೂ ಗ್ರಾಮದ ಗುರುಹಿ–ರಿಯರು ಮತ್ತು ಯುವಕರು ಭಾಗವಹಿಸಿದರು.

ಸನ್ಮಾನಿತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ, ಶಾಲು ಹಾಗೂ ಹೂಮಾಲೆಗಳನ್ನು ನೀಡಿ ಗೌರವಿಸಲಾಯಿತು. ವಿದ್ಯಾರ್ಥಿಗಳ ಪೋಷಕರೂ ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂತಸ ವ್ಯಕ್ತಪಡಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಧನ್ಯವಾದ ಅರ್ಪಣೆ ನಡೆಯಿತು. ಈ ಸನ್ಮಾನ ಸಮಾರಂಭವು ಗ್ರಾಮದಲ್ಲಿ ಶಿಕ್ಷಣದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಿ, ವಿದ್ಯಾರ್ಥಿಗಳಲ್ಲಿ ಉತ್ಸಾಹ ಮತ್ತು ಪ್ರೇರಣೆಯನ್ನು ಹೆಚ್ಚಿಸಿತು.

# ಪ್ಯಾಷನ್ ಡಿಸೈನಿಂಗ್ ಟೆಲರ್ ತರಬೇತಿಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಸ್ವ–ಉದ್ಯೋಗವನ್ನು ಸ್ಥಾಪಿಸಲು ಆಸಕ್ತ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಉಚಿತವಾಗಿ 4 ವಾರಗಳ ಪ್ಯಾಷನ್ ಡಿಸೈನಿಂಗ್ ಟೆಲರಿಂಗ್ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.**

ತರಬೇತಿ ಕಾರ್ಯಕ್ರಮವು ರಾಯಚೂರು ಹಾಗೂ ಮಾನವಿಯಲ್ಲಿ ಹಮ್ಮಿಕೊಳ್ಳಲಾಗಿದೆ. ತರಬೇತಿಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಉದ್ಯಮಶೀಲತೆಯ ಗುಣಲಕ್ಷಣಗಳು, ಸ್ವಂತ ಉದ್ಯೋಗ ಸ್ಥಾಪಿಸಲು ಸರ್ಕಾರದ ಯೋಜನೆಗಳು, ಬ್ಯಾಂಕಿನ ವ್ಯವಹಾರ ಮತ್ತು ಸಾಲ ಸೌಲಭ್ಯಗಳ ಮಾಹಿತಿ ಹಾಗೂ ಸ್ವಯಂ ಉದ್ಯಮಗಳನ್ನು ಸ್ಥಾಪಿಸಲು ಇತ್ಯಾದಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುವುದು. ರಾಯಚೂರು ಜಿಲ್ಲೆಯ ಆಸಕ್ತ ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿಗಳು 18 ವರ್ಷ ದಿಂದ 35 ವರ್ಷ ವಯಸ್ಸಿನವರಾಗಿರಬೇಕು. ಕನಿಷ್ಠ ಹತ್ತನೇ ತರಗತಿ ಪಾಸಾಗಿರಬೇಕು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರು ಏಪ್ರಿಲ್ 17ರೊಳಗಾಗಿ ಮೊಬೈಲ್ ಸಂಖ್ಯೆ: 9986600631 ಅಥವಾ 7899881410ಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಅಥವಾ ಜಂಟಿ ನಿರ್ದೇಶಕರು, ಸಿಡಾಕ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾ–ರಿಗಳ ಕಚೇರಿ, ನವೀನ ಆಸ್ಪತ್ರೆ ಪಕ್ಕದಲ್ಲಿ, ರಾಯಚೂರು ಇಲ್ಲಿಗೆ ಬಂದು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಿಡಾಕ್ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಮಾನತೆಯ ತಳಹದಿಯ ಮೇಲೆ ನಾವೆಲ್ಲರೂ ಒಂದುಗೂಡಿ ದೇಶ ಕಟ್ಟಲು ಹೆಜ್ಜೆ ಇಡೋಣ:



ನೈಜ್ಯ ದೆಸೆ ನ್ಯೂಸ್

**ಬಲಿಷ್ಠ ಸಂವಿಧಾನ ಹೊಂದಿದ ಭಾರತ ದೇಶದ ಗಣತಂತ್ರ ವ್ಯವಸ್ಥೆಯಡಿ ಸಮಾಜದಲ್ಲಿ ಸಮಾನತೆಯ ತಳಹದಿಯ ಮೇಲೆ ನಾವೆಲ್ಲರೂ ಒಂದುಗೂಡಿ ಸಂವಿಧಾನ ಶಿಲ್ಪಿ ಡಾ ಬಿ. ಆರ್. ಅಂಬೇಡ್ಕರ್ ರವರ ಜಯಂತಿಯನ್ನು ಸಾಥ–'ಕಗೊಳಿಸುವ ಪ್ರತಿಜ್ಞೆಯನ್ನು ಮಾಡೋಣವೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ತಿಳಿಸಿದರು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಲ್ಲಿ ಭಾರತರತ್ನ, ಸಂವಿಧಾನ ಶಿಲ್ಪಿ ಡಾ ಬಿ. ಆರ್. ಅಂಬೇಡ್ಕರ್ ರವರ 135 ನೇಯ ಜಯಂತ್ಯೊತ್ಸವದಲ್ಲಿ ಮಾತನಾಡುತ್ತಾ, ಸಮಾಜಿಕ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ ಪೂರ್ವದ ಕಾಲಘಟ್ಟಕ್ಕೂ ಇಂದು ಸಾಕಷ್ಟು ಬದಲಾವಣೆಯನ್ನು ಎಲ್ಲರೂ ನೋಡುತ್ತಿದ್ದಾರೆ, ಅಲ್ಲದೆ ಇಂದು ಆರೋಗ್ಯ ಕ್ಷೇತ್ರದಲ್ಲಿ ನಗರ ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಲ್ಲಿ ಗುಣಮಟ್ಟದ ಸೇವೆಯನ್ನು ಎಲ್ಲರಿಗೂ ನೀಡುತ್ತಿರುವ ಹೆಮ್ಮೆಯ ವಿಷಯವಾಗಿದೆ. ಇದನ್ನು ಯಾವುದೇ ರಾಜಿಯಿಲ್ಲದೆ ಮುಂದುವರೆಸಿಕೊಂಡು ಹೋಗುವ ಹೊಣೆಗಾರಿಕೆಯನ್ನು ಪ್ರತಿಯೊಬ್ಬರು ನಿರ್ವಹಿಸೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್, ಜಿಲ್ಲಾ ಸರ್ವೆಕ್ಷಣಾಧಿಕಾರಿ ಹಾಗೂ ಡಿಎಮ್‌ಓ ಡಾ ಗಣೇಶ್ ಕೆ, ತಾಲೂಕಾ ಆರೋಗ್ಯಾಧಿಕಾರಿ ಡಾ ಅಮೃತ್, ಮನೋರೋಗ ತಜ್ಞರ ಡಾ ಮನೋಹರ ಪತ್ತಾರ, ಸಹಾಯಕ ಆಡಳಿತ ಆಧಿಕಾರಿ ಶಹಜಾಹನ್, ಡಿಹೆಚ್‌ಇಓ ಈಶ್ವರ ಹೆಚ್ ದಾಸಪ್ಪನವರ, ಕಛೇರಿ ಅಧೀಕ್ಷಕ ಶ್ರೀಧರ್ ಕುಲಕರ್ಣಿ, ಆಪ್ತ ಸಹಾಯಕರಾದ ಲೇಪಾಕ್ಷಯ್ಯ ಸ್ವಾಮಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸುರೇಶ್, ತಾಯಪ್ಪ, ಸೇರಿದಂತೆ ಎಲ್ಲ ವಿಭಾಗಗಳ ಜಿಲ್ಲಾ ಮಟ್ಟದ ಸಲಹೆಗಾರರು, ಸಂಯೋಜ–ಕರು, ಸಿಬ್ಬಂದಿಯವರು ಉಪಸ್ಥಿತರಿದ್ದರು.

# ಹಾಲಾಪೂರ: ಗ್ರಾಪಂ ಯಲ್ಲಿ ಡಾ. ಬಿಆರ್ ಅಂಬೇಡ್ಕರ್ ಜಯಂತಿ

ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಗ್ರಾಮ ಪಂಚಾಯತಿಯಲ್ಲಿ ಸಂವಿಧಾನ ಶಿಲ್ಪಿ ಡಾ. ಬಿಆರ್ ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಯಿತು. ನಂತರ ಮಾತನಾಡಿದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿಶ್ವನಾಥ ಹೂಗಾರ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾರತೀಯ ಸಂವಿಧಾನ ಶಿಲ್ಪಿ ಹಾಗೂ ಸಾಮಾಜಿ–ಕ ಸುಧಾರಕರಾಗಿ ಇಡಿ ಭಾರತೀಯ ಮನುಕುಲಕ್ಕೆ ಸಮಾನತೆ,**



ಸ್ವಾತಂತ್ರ್ಯ, ಐಕ್ಯತೆ ಸಮಗ್ರತೆ ಪ್ರತಿಪಾದಿಸಿದ ಮಹನ್ ವ್ಯಕ್ತಿಗಳಾಗಿ ದೇಶಕ್ಕೆ ಸವಿಧಾನ ಕಾನೂನು ಕೊಟ್ಟಂತಹ ಅಗಾಧ ಪಂಡಿತರು, ಇಂದು ನಾವೆಲ್ಲರೂ ಅವರ ಕೊಟ್ಟಂತ ಸಂವಿಧಾನ ನೀತಿ ನಿಯಮಗಳನ್ನು ಎತ್ತಿ ಹಿಡಿಯುವ ಮೂಲಕ ಸಮಾಜದಲ್ಲಿ ಆದರ್ಶ ಪ್ರಾಯರಾಗಿ ಬದುಕಬೇಕು ಎಂದು ವಿಶ್ವನಾಥ ಹೂಗಾರ ಪಿಡಿಒ ಹೇಳಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಪರಣ್ಣ, ರಂಗಪ್ಪ ಕಂಪ್ಯೂಟರ್, ಗ್ರಂಥಪಾಲಕ ಗ್ಯಾನಪ್ಪ, ಮೌಲಾಸಾಬ ಹಾಗೂ ಇನ್ನಿತರರು ಇದ್ದರು.

# ಡಾ.ಬಿ.ಆರ್.ಅಂಬೇಡ್ಕರ್ 135ನೇ ಜನ್ಮ ದಿನಾಚರಣೆ: ವಿವಿಧ ಗಣ್ಯರಿಂದ ಮಾಲಾರ್ಪಣೆ, ಮೆರವಣಿಗೆಗೆ ಚಾಲನೆ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಅಂಗವಾಗಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ವಿವಿಧ ಗಣ್ಯರಿಂದ ಪೂಜೆ ಕಾರ್ಯಕ್ರಮ ನೆರವೇರಿಸಿ, ಮಾಲಾರ್ಪಣೆ ಮಾಡಿ, ಮೆರವಣಿಗೆಗೆ ಚಾಲನೆ ನೀಡಲಾಯಿತು.**

ಮೆರವಣಿಗೆಯು ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ರಂಗಮಂದಿರದವರೆಗೆ ವಿವಿಧ ಕಲಾ ಕಂಡದೊಂದಿಗೆ ಡಾ.ಬಿ.ಆರ್.ಅಂಬೇಡ್ಕರ ಅವರ ಭಾವಚಿತ್ರದ ಭವ್ಯ ಮೆರವಣಿಗೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಬೀದರ್ ಬುದ್ಧ ವಿಹಾರನ ಬಂತೇಜಿ ಯಾಕತ್ಪೂರ್, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಶಿವರಾಜ ಎಸ್.ಪಾಟೀಲ್, ಜಿಲ್ಲೆಯ ಪ್ರಭಾರಿ ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವ–ರಿಷ್ಠಾಧಿಕಾರಿ ಅರುಣಾಂಗ್ಸು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ,

ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರವೀಣ್ ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿರೇಶ ನಾಯಕ, ಸಿಡಾಕ್ ಜಂಟಿ ನಿರ್ದೇಶಕ ಜಿ.ಯು.ಹುಡೇದ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ನವೀನ್ ಕುಮಾರ್, ಮುಖಂಡರಾದ ರವಿ ಭೋಸರಾಜು, ರವೀಂದ್ರ ಜಲ್ದಾರ್, ಕೆ.ಇ.ಕುಮಾರ್, ಮಾರಪ್ಪ, ನರಸಪ್ಪ ದಡೋರ್, ಎಂ.ಈರಣ್ಣ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜ ಮುಖಂಡರು ಕಾರ್ಯಕ್ರಮದಲ್ಲಿ ಇದ್ದರು.

# ಡಾ.ಬಾಬು ಜಗಜೀವನ್ ರಾಮ್ ಮತ್ತು ಡಾ.ಬಿ.ಆರ್.ಅಂಬೇಡ್ಕರ ಜಯಂತಿಯಲ್ಲಿ ಕುಣಿದು ಕೊಪ್ಪಳಿಸಿದ ಶಾಸಕ ಬಸನಗೌಡ ತುರುವಿಹಾಳ



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದಲ್ಲಿ ತಾಲೂಕು ಆಡಳಿತ,ತಾ.ಪಂ,ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಂ–ಯುಕ್ತಾಶ್ರಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ ಹಾಗೂ ಡಾ.ಬಾಬು ಜಗಜೀವನ ರಾಮ್ ಅವರ ಜಯಂತಿ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.**

ಈ ಕಾರ್ಯಕ್ರಮಕ್ಕೆ ಶಾಸಕ ಆರ್ ಬಸನಗೌಡ ತುರುವಿಹಾಳ ಚಾಲನೆ ನೀಡಿ, ಜೊತೆಗೆ ದಲಿತಪರ ಸಂಘಟನೆಗಳು ಪದಾಧಿಕಾರಿಗಳು ಅಭಿಮಾನಿಗಳು ಈ ಅದ್ದೂರಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೇರಗು ನೀಡಿದರು. ಈ ವೇಳೆ ಬಿರು ಬಿಸಿಲು ಮದ್ಯೆ ಶಾಸಕರು ಹಾಗೂ ಮುಖಂಡರು, ಅಭಿಮಾನಿಗಳುಹಾಡಿಗೆ ಭರ್ಜರಿ ಕುಣಿದು ಕುಪ್ಪಳಿಸಿದ್ದು ವಿಶೇಷವಾಗಿತ್ತು.

ಈ ವೇಳೆ ಪುರಸಭೆ ಅಧ್ಯಕ್ಷ ಸುರೇಶ ಅರಸುರು, ತಹಸೀಲ್ದಾರ ಮಂಜುನಾಥ ಭೋಗವತಿ,ಸಿಪಿಐ ಆರ್.ವೈ.ಜಲಗೇರಿ,ತಾಲ್ಲೂಕು ಪಂಚಾಯಿತಿ ಇಓ ಅಮರೇಶ ಯಾದವ್,ಪುರಸಭೆ ಮುಖ್ಯಅಧಿಕಾರಿ ನರಸರೆಡ್ಡಿ , ಮುಖಂಡರಾದ ಎಚ್.ಬಿ.ಮುರಾರಿ, ಮಲ್ಲಿಕಾರ್ಜುನ್ ಪಾಟಿಲ್ ಯದ್ದಲದಿನ್ನಿ, ದಾನಪ್ಪ ನೀಲೋಗಲ್, ದೊಡ್ಡಪ್ಪ ಮುರಾರಿ, ಮಲ್ಲಯ್ಯ ಬಳ್ಳಾ, ಹನುಮಂತಪ್ಪ ವೆಂಕಟಾಪೂರು, ಮೈಬುಸಾಬ್ ಮುದ್ದಾಪುರ,, ಹನುಮಂತಪ್ಪ ಮುದ್ದಾಪುರ, ನಾಗಭೂಷಣ ಹಾಗೂ ಇನ್ನು ಅನೇಕರು ಇದ್ದರು.

# ಅಂಬೇಡ್ಕರ್ ವಿಚಾರಗಳು ಅನುಸಂಧಾನಗೊಳ್ಳುವ ಅಗತ್ಯವಿದೆ ಚಂದ್ರಶೇಖರ ಗೊರೇಬಾಳ

ನೈಜ್ಯ ದೆಸೆ ನ್ಯೂಸ್




**ಬಾಬಾ ಸಾಹೇಬ್ ರ ವಿಚಾರಗಳನ್ನು ತಿಳಿದುಕೊಳತ್ತಾ ಅವರೊಂದಿಗೆ ಅನುಸಂಧಾನವಾಗಬೇಕಾಗಿದೆ.ಎಂದು ನಗರದ ಎಲ್ ಬಿ ಕೆ ಪದವಿ ಪೂರ್ವ ನೊಬಲ್ ಪದವಿ ಮಹಾವಿದ್ಯಾಲಯ ಹಾಗೂ ಎನ್ ಎಸ್ ಎಸ್ ಘಟಕ ದಿಂದ ಆಯೋಜಿಸಿದ್ದ ಡಾ.ಅಂಬೇಡ್ಕರ್ ಅವರ ಜಯಂತಿಯಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತಾಡಿದರು.**

ಇಂದು ಎಲ್ಕಡೆ ಕಾಟಾಚಾರದ ಸರಕಾರಿ ಜಯಂತಿಗಳನ್ನು ಆಚರಣೆ ಮಾಡುತ್ತಿರುವುದು ವಿಷಾಧಕರ .ಈ ಹಿಂದೆ ಇದ್ದ ದಲಿತ ಸಂಘಟನೆಗಳು ಅಂಬೇಡ್ಕರ್ ಅವರನ್ನು ಪರಿಯಿಸುವ ಕೆಲಸ ಮಾಡುತ್ತಿದ್ದವು. ಈ ಹಿಂದೆ ಶಿಕ್ಷಣ ವ್ಯವಸ್ಥೆಯಲ್ಲಿ ಎಲ್ಲಾ ಮಕ್ಕಳಿಗೆ ಸಾಮಾನತೆ ಅವಕಾಶ ಇರದೆ ತರಗತಿಯಲ್ಲಿ ಮೂರು ಸಾಲುಗಳಲ್ಲಿ ದಲಿತರು ತಾವು ತಗಿದುಕೊಂಡು ಬಂದ ಗೋಣಿಚೀಲ ಹಾಸಿಕೊಂಡು ಹೊರಗಡೆ ಕುಳಿತುಕೊಳ್ಳುವ ಆ ಕಾಲ ಇಂದು ಇಲ್ಲ ಕಾರಣ ಅಂಬೇಡ್ಕರ್ ಅವರ ಸಂವಿಧಾನವೆ ಕಾರಣ.ಇಂತಹ ವ್ಯವಸ್ಥೆಯಿಂದ ಈಗ ಅರಿವಿನ ಪ್ರಜ್ಞೆ ಬಂದಿದೆ. ಸಮಾನತೆಯ ಸಮಾಜದ ಆಶಯಗಳನ್ನು ಕಾನೂನು ರೂಪದಲ್ಲಿ ಬಂದಿದರಿಂದ ಇಂದು ಸಮಸಮಾಜ ರೂಪಗೊಳ್ಳುತ್ತಿರವುದು ಆಶದಾಯಕವಾಗಿದೆ.

ಅಂಬೇಡ್ಕರ್ ಅವರ ಮೊಮ್ಮಗಳ ಮಗ ಚಿಂತಕರಾದ ತೆಲತುಂಬಡಿ ಅವರು ಅಂಬೇಡ್ಕರ್ ಕುರಿತು ಈ ಹಿಂದೆ ಇದ್ದ ಜಾತಿಯನ್ನು ಬಹಿರಂಗವಾಗಿ ಆಚರಿಸುವ ಕಾಲಘಟ್ಟ ಇಂದು ಮಸಕು ಹಾಕಿಕೊಂಡು ಆಚರಿಸುವಷ್ಟುರ ಮಟ್ಟಿಗೆ ಸಮಾಜ ಬದಾಲಾಯಿಸಿದ್ದಾರೆ.ಇದು ಬದಲಾವಣೆ. ಪ್ರತಿ ದರ್ಮದಲ್ಲಿಯೂ ಇಂತಹ ಅಸಮಾನತೆಯಿಂದ ಬಳಲುತಿವೆ. ಈ ದೇಶದಲ್ಲಿ ಓಟ ನೀಡಿ ಪ್ರಜಾಸತ್ತಾತ್ಮಕ ಸಾಮಾಜ ಕಟ್ಟಿದವರು. ಆರ್ಥಿಕ ಅಸಮಾನತೆ ತೊಗಲಿಸಲು ಬೇರೆ ದೇಶದಿಂದ ಎರವಲು ಪಡೆದುಕೊಂಡು ಆರ್ಥಿಕ ಶಕ್ತಿ ತುಂಬಿದರು.ಹೆಣ್ಣಿಗೆ ಆಸ್ತಿ ಹಕ್ಕು ದಕ್ಕಿಸಿಕೊಟ್ಟು ಪುರುಷ ಮಹಿಳೆ ಎಂಬ ಬೇದವನ್ನು ದೂರ ಇಟ್ಟಿದ್ದಾರೆ. ಮೀಸಲಾತಿ ವಿಷಯವಾಗಿ ದಲಿತ ಹಿಂದುಳಿದ ಅಲೆಮಾರಿಗಳು ಮಾತ್ರ ಫಲನಾಉಬವಿಗಳಲ್ಲ .ಎಲ್ಲಾ ಸಮುದಾಯದ ಜನತೆಯೂ ಮೀಸಲಾತಿ ಪಡೆಯುತ್ತಿದ್ದಾರೆ.

ಪ್ರಭುತ್ವ ಮತ್ತು ಅಲ್ಪಸಂಖ್ಯಾತರು ಕೃತಿಯಲ್ಲಿ ಭೂಮಿ ಒಳಗೊಂಡಂತೆವಿ ಇನ್ನಿತರ ಸೇವಾ ಕ್ಷೇತ್ರಗಳು ಖಾಸಗಿಯಲ್ಲಿ ಇದ್ದವು ಆದ–'ರೆ ಇಂದು ರಾಷ್ಟ್ರಿಕರಣವಾಗಿತ್ತಿರುವುದು ಆಶಯದಾಯಕವಾಗಿವೆ.ಜಾಗತೀಕರಣ, ಖಾಸಗೀಕರಣ,ಉದಾರೀಕರಗಳ ಪ್ರಭಾವಕ್ಕೊಳಾಗಾಗಿ ಇಂದು ಎಲ್ಲಾ ಕ್ಷೇತ್ರಗಳು ಖಾಸಗೀಕರಣ ಮಾಡಿ ಜನ ಸಾಮನ್ಯರ ಜೀವನ ದುರ್ಬಲವಾಗಿಸಿವೆ. ಇಂದು ದಲಿತ ಅಲೆಮಾರಿ ಹಿಂದುಳಿದ ಅಲ್ಪಸಂಖ್ಯಾತ ಜನರನ್ನು ಮನಷ್ಯರಂತೆ ಕಾಣುವು ಅಗತ್ಯತವಿದೆ. ಈ ಸಂದರ್ಭದಲ್ಲಿ ಕಾಲೇಜು ಅದ್ಯಕ್ಷರಾದ ಪರಶುರಾಮ ಮಲ್ಲಾಪುರ ಕಾರ್ಯಕ್ರಮದ ಅದ್ಯಕ್ಷತೆ ವಹಿಸಿದ್ದರು.

ಕಾಲೇಜಿನ ಕಾರ್ಯದರ್ಶಿಯಾದ ಡಾ.ಅರುಣಕುಮಾರ ಬೇರ್ಗಿ ಖಜಾಂಚಿಯಾದ ಜಯಪ್ಪ ಗೊರೇಬಾಳ ನೊಬೆಲ್ ಪ್ರಾಂಶುಪಾಲರಾದ ಶ್ರೀಮತಿ ಐಶ್ವರ್ಯ ದಳವಾಯಿ,ಎಲ್ ಬಿ ಕೆ ಕಾಲೇಜಿನ ಪ್ರಾಂಶುಪಾಲರಾದ ಶೀವುಕುಮಾರ ಬಿಂಗಿ ಹಾಗೂ ಎನ್ ಎಸ್ ಎಸ್ ಅಧಿಕಾ–ರಿಗಳಾದ ಹೊನ್ನಪ್ಪ ಬೆಳಗುರ್ಕಿ ಓದು ಬಳಗದ ಸಂಚಲಾಕರಾದ ವಸಂತಕುಮಾರ ನುಡಿ ಕೂಟದ ಸಂಚಲಕಾರದ ಜ್ಯೋತಿ ವೇದಿಕೆಯ ಮೇಲಿದ್ದರು. ಉಪನ್ಯಾಸಕರಾದ ಬಸವರಾಜ ದೇವಿಪುರ ಮೌಲಸಾಬ ಪಂಚಾಕ್ಷರಿಯ್ಯ ನಂದಿನಿ ಅಶ್ವಿನಿ ಉಪಸ್ಥಿತಿ ಇದ್ದರು.ಕು ಪಾರ್ವತಿ ನಿರೂಪಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಟೆಕ್ ಪ್ರೊಡಕ್ಷನ್ ಎಂಜಿನಿಯರಿಂಗ್

ಬಿ.ಟೆಕ್ ಪ್ರೊಡಕ್ಷನ್ ಎಂಜಿನಿಯರಿಂಗ್ ಎಂಬುದು ಉತ್ಪಾದನಾ ಕ್ಷೇತ್ರದಲ್ಲಿ ಕೆಲಸ ಮಾಡಲು ಹಾಗೂ ಉತ್ಪಾದಿಸುವ ಸರಕುಗಳು, ಯಂತ್ರೋಪಕರಣಗಳು, ವ್ಯವಸ್ಥೆಗಳು ಮತ್ತು ಗ್ಯಾಜೆಟ್‌ಗಳ ತಾಂತ್ರಿಕ ನಿರ್ವಹಣೆಯಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಉತ್ತಮ ವೃತ್ತಿ ಆಯ್ಕೆಯಾಗಿದೆ. ಈ ಕೋರ್ಸ್‌ನಲ್ಲಿ ಉತ್ಪಾದನಾ ಪ್ರಕ್ರಿಯೆಗಳ ವಿನ್ಯಾಸ, ಯೋಜನೆ, ಜೋಡಣೆ (Assembly), ಗುಣಮಟ್ಟ ನಿಯಂತ್ರಣ, ಉತ್ಪಾದನಾ ವ್ಯವಸ್ಥೆಗಳ ಏಕೀಕರಣ ಮತ್ತು ಆಡಳಿತ ಕುರಿತಾಗಿ ಆಳವಾದ ಜ್ಞಾನವನ್ನು ನೀಡಲಾಗುತ್ತದೆ. ಉತ್ಪಾದನಾ ಎಂಜಿನಿಯರ್‌ಗಳು ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಉತ್ಪಾದನಾ ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ.ಬಿ.ಟೆಕ್ ಪ್ರೊಡಕ್ಷನ್ ಎಂಜಿನಿಯರಿಂಗ್ ಕೋರ್ಸ್‌ಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು: ಶೈಕ್ಷಣಿಕ ಅರ್ಹತೆ ಪಿಯುಸಿ / 12ನೇ ತರಗತಿ (ವಿಜ್ಞಾನ ವಿಭಾಗ) ಉತ್ತೀರ್ಣರಾಗಿರಬೇಕು. ಗಣಿತ (Mathematics), ಭೌತಶಾಸ್ತ್ರ (Physics), ರಸಾಯನಶಾಸ್ತ್ರ (Chemistry) ವಿಷಯಗಳು ಕಡ್ಡಾಯವಾಗಿರಬೇಕು. ಸಾಮಾನ್ಯವಾಗಿ ಕನಿಷ್ಠ 45% 50% ಅಂಕಗಳು ಅಗತ್ಯ (ವರ್ಗಾನುಸಾರ ರಿಯಾಯಿತಿ ಇರುತ್ತದೆ). ಪ್ರವೇಶ ವಿಧಾನ KCET (ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ) JEE Main COMED-K ಅಥವಾ ಕಾಲೇಜು ಮಟ್ಟದ ಪ್ರವೇಶ ಕೋರ್ಸ್ ಅವಧಿ 4 ವರ್ಷಗಳು (8 ಸೆಮಿಸ್ಟರ್) ಅಗತ್ಯ ಕೌಶಲ್ಯಗಳು ತಾಂತ್ರಿಕ ಆಸಕ್ತಿ ಯಂತ್ರೋಪಕರಣಗಳ ಬಗ್ಗೆ ತಿಳುವಳಿಕೆ ಸಮಸ್ಯೆ ಪರಿಹಾರ ಸಾಮರ್ಥ್ಯ ವಿನ್ಯಾಸ ಮತ್ತು ಉತ್ಪಾದನಾ ಪ್ರಕ್ರಿಯೆಗಳ ಮೇಲೆ ಆಸಕ್ತಿ ಇಂದಿನ ಕೈಗಾರಿಕಾ ವಲಯದಲ್ಲಿ ನವೀನ ಉತ್ಪಾದನಾ ವಿಧಾನಗಳನ್ನು ಅಳವಡಿಸಿಕೊಂಡಿರುವ ಕಂಪನಿಗಳಲ್ಲಿ ಪ್ರೊಡಕ್ಷನ್ ಎಂಜಿನಿಯರ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ. ಉದ್ಯೋಗಾವಕಾಶಗಳು: ಮ್ಯಾನುಫ್ಯಾಕ್ಚರಿಂಗ್ ಕಂಪನಿಗಳು ಆಟೋಮೊಬೈಲ್ ಇಂಡಸ್ಟ್ರಿ ಏರೋಸ್ಪೇಸ್ ಉದ್ಯಮ ಯಂತ್ರೋಪಕರಣ ತಯಾರಿಕಾ ಸಂಸ್ಥೆಗಳು ಗುಣಮಟ್ಟ ನಿಯಂತ್ರಣ ವಿಭಾಗ ಪ್ರೊಡಕ್ಷನ್ ಮ್ಯಾನೇಜ್‌ಮೆಂಟ್ ಉದ್ಯೋಗ ಹುದ್ದೆಗಳು: ಪ್ರೊಡಕ್ಷನ್ ಎಂಜಿನಿಯರ್ ಪ್ಲಾಂಟ್ ಎಂಜಿನಿಯರ್ ಮ್ಯಾನುಫ್ಯಾಕ್ಚರಿಂಗ್ ಎಂಜಿನಿಯರ್ ಕ್ವಾಲಿಟಿ ಕಂಟ್ರೋಲ್ ಎಂಜಿನಿಯರ್ ಆಪರೇಷನ್ಸ್ ಮ್ಯಾನೇಜರ್

## ಕಾರುಣ್ಯಾಶ್ರಮದ ಸೇವೆ ಭಗವಂತನ ಪೂಜೆಗಿಂತ ಮಿಗಿಲಾದುದುದು :ರಮೇಶ ವಟ್ಟಿಕೂಟಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಕಾರಟಗಿ ತಾಲೂಕಿನ ಸಿದ್ದಾಪುರ ಗ್ರಾಮದ ಸಾಯಿ ದರ್ಶನ ಟಿಫಿನ್ ಸೆಂಟರ್ ಮಾಲೀಕರುಗಳಾದ ರಾಮಲಕ್ಷ್ಮಿ ರಮೇಶ ವಟ್ಟಿಕೂಟಿ ಈ ದಂಪತಿಗಳ 26ನೇ ವರ್ಷದ ವಿವಾಹ ವಾರ್ಷಿಕೋತ್ಸವ ಸಮಾರಂಭ ಕಾರ್ಯಕ್ರಮವನ್ನು ಆಶ್ರಮದಲ್ಲಿ ಇಡೀ ದಿನ ವಿವಿಧ ಮಹಾಪ್ರಸಾದ ಸೇವೆ ಹಾಗೂ ಅಣ್ಣೊಬ್ಬರಗಳನ್ನು ವಿತರಿಸುವ ಮೂಲಕ ಸರಳವಾಗಿ ಅರ್ಥಪೂರ್ಣವಾಗಿ ಆಚರಿಸಿಕೊಂಡರು.**



ಈ ಕಾರ್ಯಕ್ರಮದಲ್ಲಿ ಆಶ್ರಮದ ವತಿಯಿಂದ ವಟ್ಟಿಕೂಟಿ ಕುಟುಂಬವನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ರಮೇಶ ವಟ್ಟಿಕೂಟಿ ಮಾತನಾಡಿ ಕಾರುಣ್ಯಾಶ್ರಮದ ಸೇವೆ ಭಗವಂತನ ಪೂಜೆಗಿಂತ ಮಿಗಿಲಾದುದು. ನಮ್ಮ ಭಾರತೀಯ ಸಂಸ್ಕೃತಿ ಸಂಸ್ಕಾರವನ್ನು ಉಳಿಸುವ ನಿಟ್ಟಿನಲ್ಲಿ ಕಾರುಣ್ಯ ಆಶ್ರಮವು ಪ್ರಾಮಾಣಿಕವಾಗಿ ಸೇವೆ ಮಾಡುತ್ತಿದೆ. ನಾವು ಸುಮಾರು ವರ್ಷಗಳಿಂದ ಕಾರುಣ್ಯ ಆಶ್ರಮಕ್ಕೆ ಭೇಟಿಕೊಡುತ್ತಾ ಇದನ್ನು ಸ್ವಂತ ಕುಟುಂಬ ಎಂದುಕೊಂಡಿದ್ದೇವೆ.

ಇಂತಹ ಪ್ರಾಮಾಣಿಕ ಸೇವೆ ಮಾಡುವಂತಹ ಸಂಸ್ಥೆಗೆ ಸರ್ಕಾರದ ಜಾಗ ಹಾಗೂ ಅನುದಾನ ಸಿಗದಿರುವುದು ನಾಚಿಕೆಗೇಡಿನ ಸಂಗತಿ ಆದ್ದರಿಂದ ಸಿಂಧನೂರಿನ ಜನಪ್ರತಿನಿಧಿಗಳು ಮನಸ್ಸು ಮಾಡಿ ಆಶ್ರಮಕ್ಕೆ ಸ್ವಂತ ಜಾಗ ಕಲ್ಪಿಸಿಕೊಟ್ಟರೆ ತಮ್ಮ ರಾಜಕೀಯ ಬದುಕಿಗೆ ಸಂಪೂರ್ಣ ಅರ್ಥ ಸಿಗುತ್ತದೆ. ಕಾರುಣ್ಯಶ್ರಮದ ಅನಾಥರ ಬದುಕಿನ ಬಂಡಿಯ ಗಾಲಿಗಳೇ ಈ ಆಶ್ರಮಕ್ಕೆ ಸಹಾಯ ಮಾಡುವ ಮಹಾದಾನಿಗಳು ನಾನು ನನ್ನದು ಎನ್ನುವ ಸ್ವಾರ್ಥ ಜಗತ್ತಿನಲ್ಲಿ ನಿಸ್ವಾರ್ಥದ ಸೇವೆ ಮಾಡುತ್ತಾ ಅದೆಷ್ಟು ಅಂದ ಅನಾಥರ ಬಾಳಿಗೆ ಬೆಳಕಾಗಿರುವ.

ಈ ನಮ್ಮ ಕಾರುಣ್ಯಾಶ್ರಮವು ಕಲ್ಯಾಣ ಕರ್ನಾಟಕದ ಕರುಣೆಯ ಮಂದಿರವಾಗಿ ಅನಾಥರ ಬದುಕಿನ ಸುಂದರ ಕುಟುಂಬವಾಗಿರುವುದು ನಮ್ಮೆಲ್ಲರಿಗೆ ಸಂತೋಷ ನಾವು ಸದಾ?ವಕಾಲ ಕಾರುಣ್ಯ ಆಶ್ರಮದ ಜೊತೆಗಿರುತ್ತೇವೆ ಎಂದು ಭಾವನಾತ್ಮಕವಾಗಿ ಮಾತನಾಡಿ ಹಣ್ಣು ಹಂಪಲುಗಳನ್ನು ವಿತರಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಎನ್. ಶ್ರೀನಿವಾಸ ಮಾಲೀಕರು- ಶ್ರೀ ಸಾಯಿ ಪ್ರಸನ್ನ ಟಿಫಿನ್ ಸೆಂಟರ್ ಜಂಗಮರ ಕಲ್ಲುಡಿ ಗಂಗಾವತಿ. ಡಿ. ಶ್ರೀನಿವಾಸ. ಮೈನುದ್ದೀನ್. ಎನ್.ಶ್ವೇತಾ. ತನುಶ್ರೀ.ಹರೀಶ.ಮೋಹಿತ್. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತಾ ಮಲದ ಗುಡ್ಡ ಸಿದ್ದಯ್ಯ ಸ್ವಾಮಿ ಮರಿಯಪ್ಪ ಜ್ಯೋತಿ. ಮೀನಾಕ್ಷಿಮ್ಮ. ಲಕ್ಷ್ಮಿ.ಶರಣು ಸ್ವಾಮಿ ಅನೇಕರು ಉಪಸ್ಥಿತರಿದ್ದರು.

## ಕೊಪ್ಪಳ ಶ್ರೀ ಗವಿಸಿದ್ದೇಶ್ವರ ಪುರಾಣ ಮಹಾಮಂಗಳ ಮತ್ತು ಸಾಮೂಹಿಕ ಮದುವೆ

ನೈಜ್ಯ ದೆಸೆ ನ್ಯೂಸ್

**ತಿಮ್ಮಾಪುರ: ಎ 02 ರಿಂದ ಎ 14 ರವರೆಗೆ ಶ್ರೀ ವೇ. ಮೂ. ಜಗದೀಶ್ವರ ಶಾಸ್ತ್ರಿಗಳು ಹಿರೇಮಠ್ ಮದ್ಲಾಪುರ್ ಸಂಗೀತ ಶ್ರೀ ವೀರಭದ್ರಯ್ಯ ಬೆಣಕಲ್ ತಬಲವಾದಕರು ಶ್ರೀ ವಿಕಾಸ್ ಹುನುಗುಂದ ಹಾಗೂ ನಾಡಿನ ಅರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಸಮ್ಮುಖದಲ್ಲಿ ಜವಳಗೇರ ಸಂಸ್ಥಾನಕ್ಕೆ ಸೇರಿದ ತಿಮ್ಮಪೂರಿನಲ್ಲಿ ಶ್ರೀ ಅವಧೂತ ಅಯ್ಯಪ್ಪ ತಾತನವರ 131ನೇ ಪುಣ್ಯಾರಾಧನೆ ಮಹೋತ್ಸವವು ಭಕ್ತಿಭಾವದಿಂದ ಹಾಗೂ ಅದ್ದೂರಿಯಾಗಿ ನೆರವೇರಿತು.**



ಈ ಸಂದರ್ಭದಲ್ಲಿ ಕೊಪ್ಪಳ ಗವಿಸಿದ್ದೇಶ್ವರ ಪುರಾಣ ಮಹಾಮಂಗಳ ಮತ್ತು ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಭಕ್ತರ ಸಮ್ಮುಖದಲ್ಲಿ ಯಶಸ್ವಿಯಾಗಿ ನಡೆದವು. ಬೆಳಗಿನ ಜಾವದಲ್ಲಿ ಶ್ರೀ ಅವಧೂತ ಅಯ್ಯಪ್ಪ ತಾತನವರಿಗೆ ಶ್ರೀ ಸಿದ್ದಯ್ಯ ತಾತನವರು ಹಾಗೂ ಶ್ರೀ ವೀರೇಶ್ ತಾತನವರಿಂದ ರುದ್ರಾಭಿಷೇಕ ಪೂಜೆ ಭಕ್ತಿಭಾವದಿಂದ ನೆರವೇರಿತು. ತದನಂತರ ಪರಮ ಪೂಜ್ಯ ಶ್ರೀ ಮಹೇಶ್ ತಾತನವರಿಂದ ಮತ್ತು ಶರಣರಿಂದ 20 ನವ ಜೋಡಿ ದಂಪತಿಗಳಿಗೆ ಆಶೀರ್ವದಿಸಿದರು ತದನಂತರ ಆಗಮಿಸಿರುವ ಶರಣರಿಗೆ ಹಾಗೂ ಗಣ್ಯರಿಗೆ ಪೂಜ್ಯಶ್ರೀ ಮಹೇಶ್ ತಾತನವರಿಂದ ಗೌರವ ಸಮರ್ಪಣೆ ಮಾಡಲಾಯಿತು ಹಾಗೂ ಊರಿನ ಗುರು ಹಿರಿಯರ ಉಪಸ್ಥಿತಿಯಲ್ಲಿ ಕಾರ್ಯಕ್ರಮಗಳು ಅತ್ಯಂತ ಭವ್ಯವಾಗಿ ಜರುಗಿದವು. ಸಾವಿರಾರು ಭಕ್ತರು ಈ ಪವಿತ್ರ ಸಂದರ್ಭದಲ್ಲಿ ಭಾಗವಹಿಸಿ ತಾತನವರ ದರ್ಶನವನ್ನು ಪಡೆದು ಧನ್ಯರಾದರು. ಕಾರ್ಯಕ್ರಮದ ಅಂತ್ಯದಲ್ಲಿ ಭಕ್ತರಿಗೆ ಮಹಾ ಪ್ರಸಾದ ದಾಸೋಹ ಏರ್ಪಡಿಸಲಾಗಿತ್ತು, ಎಲ್ಲರೂ ಭಕ್ತಿಪೂರ್ಣವಾಗಿ ಸ್ವೀಕರಿಸಿದರು. ಹಾಗೂ ಊರಿನ ಗುರು ಹಿರಿಯರು ತಾಯಿಯಂದಿರು ಸಾವಿರಾರು ಸಕಲ ಸದ್ಭಕ್ತಾದಿಗಳು ಸೇರಿ ಆ ತಾತನ ಕೃಪೆಗೆ ಪಾತ್ರರಾದರು.

### ಮಸ್ಕಿಯಲ್ಲಿ ಡಾ. ಬಿಆರ್ ಅಂಬೇಡ್ಕರ್ ಹಾಗೂ ಬಾಬು ಜಗಜೀವನ ರಾಮ್ ಜಯಂತೋತ್ಸವ

## ದೇಶದಲ್ಲಿ ಹಸಿವಿಗಿಂತ ಅವಮಾನ ಭೀಕರವಾದದ್ದು.: ಆರ್.ಮಾನಸಯ್ಯ



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪ್ರತಿಯೊಬ್ಬರು ಬುದ್ಧ, ಬಸವಣ್ಣನನ್ನು ಡಾ.ಆರ್.ಅಂಬೇಡ್ಕರ್‌ರೊಳಗೆ ಕಂಡಾಗ ಮಾತ್ರ ಬಹುತ್ವ ಸಂಸ್ಕೃತಿ ಕಾಪಾಡಿಕೊಂಡು ಸಮಾನತೆಯೊಂದಿಗೆ ಪ್ರಗತಿಸಾಧಿಸುತ್ತದೆ. ಸಂವಿಧಾನ ದೇಶದ ಭದ್ರ ಬುನಾದಿ ಒದಗಿಸಿದೆ ಎಂದು ಆರ್.ಮಾನಸಯ್ಯ ಹೇಳಿದರು.**

ಪಟ್ಟಣದಲ್ಲಿ ತಾಲೂಕಾಡಳಿತ, ತಾಲೂಕ ಪಂಚಾಯತಿ, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖಿಯಿಂದ ಹಮ್ಮಿಕೊಂಡಿದ್ದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ 135 ಮತ್ತು ಡಾ.ಬಾಬು ಜಗಜೀವನ್‌ರಾಮ್ ಅವರ 119 ಜಯಂತಿ ಕಾರ್ಯಾಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಮಾತನಾಡಿದ ಅವರು, ಅಸ್ಪೃಶ್ಯತೆಯ ಕಾರಣಕ್ಕೆ ಕುಡಿಯಲು ನೀರು ಸಿಗದೇ, ಓದುವ ವಿದ್ಯೆ ದೂರವಾಗಿ, ಜನರು ತಮ್ಮ ಹಕ್ಕುಗಳಿಗಾಗಿ ಒದ್ದಾಟ ನಡೆಸುತ್ತಿದ್ದ ಸಂದರ್ಭವನ್ನು ಕಣ್ಣಾರೆ, ಕಂಡು ತಾವೂ ಅದನ್ನು ಅನುಭವಿಸಿ ಮುಂದೆ ಶಿಕ್ಷಣ ಎಂಬ ಸಂಜೀವಿನಿಯ ಮೂಲಕವೇ ದೇಶದ ಜನರಿಗೆ ಅದರಲ್ಲೂ ಶೋಷಿತ ವರ್ಗದ ಜನರಿಗೆ ಸಮಾನ ಹಕ್ಕುಗಳನ್ನು ಒದಗಿಸುವ ಕೆಲಸವನ್ನು ಯಾರಾದರೂ ಮಾಡಿದ್ದರೆ ಅದು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಅವರು ಹೇಳಿದರು. ದೇಶದ ಬಹು ಜನರ ಬದುಕಿನ ಆಶಯಕ್ಕೆ ವಿರುದ್ಧವಾಗಿದ್ಧಂತಹ ಧಾರ್ಮಿಕ ವಿಷದ ಕಂತೆಯಾಗಿದ್ದ ಮನುಸ್ಮೃತಿಯನ್ನು ಸುಟ್ಟ ಬಾಬಾ ಸಾಹೇಬರು, ಕುಡಿಯುವ ನೀರಿಗಾಗಿ ನಡೆದ ಜಗತ್ತಿನ ಮೊದಲ ಹೋರಾಟವಾದ ಮಹಾಡ್ ಚಳುವಳಿಯ ನೇತೃತ್ವವನ್ನು ವಹಿಸಿದ್ದರು.

ಬಹುಜನರ ಪರವಾಗಿ, ಪ್ರಜಾಪ್ರಭುತ್ವ ಉಳಿವಿಗಾಗಿ ಬಹುದೊಡ್ಡ ಧರ್ಮಯುದ್ಧ ಮಾಡಿದ ಜಗತ್ತಿನ ಮಹಾನ್ ನಾಯಕ ಎಂದು ಹೇಳಿದರು. ನಮ್ಮ ದೇಶ ಇತಿಹಾಸವನ್ನು ಅರಿವಿಲ್ಲದಂತೆ ತಿರುಚುವ ಕೆಲಸವಾಗಿದೆ. ಹಿಂದಿನ ವಿದ್ಯಾರ್ಥಿಗಳು, ಯುವಕರು ಮೂರನೇ ಪಂಚಚಾರ್ಷಿಕ ಯೋಜನೆ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ಮಹಿಳೆಯರಿಗೆ ಅವಕಾಶ ನೀಡಿದ ಜಾಗದಲ್ಲಿ ಮಹಿಳೆಯರೇ ಇರುವುದಿಲ್ಲ. ಯಾವ ಜಾಗದಲ್ಲಿ ದೇವಾದಾಸಿ ಎಂಬ ಪಟ್ಟಕಟ್ಟಿರೋ ಅಂತಹ ಜಾಗದಲ್ಲಿ ಮಹಿಳೆಯರು ಲಕ್ಷಾಂತರ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆಂದು ವಿಷಾದ ವ್ಯಕ್ತಪಡಿಸಿದರು. ಈ ದೇಶದಲ್ಲಿ ಎಲ್ಲಾರಿಗೂ ಮಾತನಾಡುವ ಸ್ವಾತಂತ್ರ ಸಿಕ್ಕಿಲ್ಲ. ಅದು ಕೇವರಿಗೆ ಮಾತ್ರ ಸೀಮಿತವಾಗಿದೆ.

ಇನ್ನೂ ಗ್ರಾಮೀಣ ಭಾಗದಲ್ಲಿ ಅಸ್ಪೃಶ್ಯತೆ ಜೀವಂತ ಇದೆ. ಆದರೆ ಆದರ ಸ್ವರೂಪ ಬಸಲಾಗಿದೆ. ದೇಶದಲ್ಲಿ ಜಾತಿ ಯಾರಿಗೆ ವರವಾಗಿದೆ ಅಂತಹವರು ಜಾತಿಯನ್ನು ಬೆಳಸುತ್ತಿದ್ದಾರೆ. ಯಾರಿಗೆ ವರವಾಗಿಲ್ಲ ಅವರು ಜಾತಿಗೆ ವಿನಾಶ ಮಾಡಲಿಕ್ಕೆ ಹೊರಟಿದ್ದಾರೆಂದು ಹೇಳಿದರು.

ನಂತರ ಖಾದಿ ಗ್ರಾಮೊದ್ಯೋಗ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಆರ್.ಬಸನಗೌಡ ತುರವಿಹಾಳ ಮಾತನಾಡಿ ಬಾಬಾ ಸಾಹೇಬರು ನೀಡಿದ ಸಂವಿಧಾನದಡಿಯಲ್ಲಿ ನಾನು ಶಾಸಕನಾಗಿದ್ದು, ಸಮಾಜದಲ್ಲಿ ಸಮಾನತೆಯಿಂದ ಜನರು ಜೀವನ ಸಾಗಿಸಬೇಕೆಂಬ ದ್ಯೇಯದೊಂದಿಗೆ ಶ್ರೇಷ್ಠ ಸಂವಿಧಾನವನ್ನು ಬಾಬಾ ಸಾಹೇಬರು ನೀಡಿದ್ದಾರೆ.

ಆದ್ದರಿಂದ ನಾವೆಲ್ಲಾರೂ ಸಂವಿಧಾನದ ಆಸೆಯದಂತೆ ಅಂಬೇಡ್ಕರ್ ಅವರ ತತ್ವ ಅದರ್ಶಗಳನ್ನು ಜೀವನದಲ್ಲಿ ಅಳವಡಿಕೊಳ್ಳಬೇಕೆಂದರು. ಸಂಘ-ಸಂಸ್ಥೆಗಳ ಪದಾಧಿಕಾರಿಗಳಿದ್ದರು.

ಮೆರವಣಿಗೆ: ಪಟ್ಟಣದ ಗಾಂಧಿನಗರದಿಂದ ಭ್ರಮರಾಂಬ ಕಲ್ಯಾಣ ಮಂಟಪದವರೆಗೆ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ್‌ರಾಮ್ ಭಾವಚಿತ್ರದ ಮೆರವಣಿಗೆಯನ್ನು ಶಾಸಕ ಆರ್.ಬಸನಗೌಡ ತುರವಿಹಾಳ ಮತ್ತು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಚಾಲನೆ ನೀಡಿದರು. ವಿವಿಧಡೆ: ಪಟ್ಟಣದ ತಹಸೀಲ್ದಾರ್ ಕಾರ್ಯಾಲಯ ತಾಲೂಕು ಪಂಚಾಯಿತಿ, ನೀರಾವರಿ ಇಲಾಖೆ, ನಗರ ಯೋಜನಾ ಪ್ರಾಧಿಕಾರ ಕಛೇರಿ, ರೈತ ಸಂಪರ್ಕ ಕೇಂದ್ರ,



ಈ ಸಂದರ್ಭದಲ್ಲಿ ತಹಸೀಲ್ದಾರ್ ಮಂಜುನಾಥ ಭೋಗಾವತಿ, ತಾ.ಪಂ ಇಒ ಅಮರೇಶ ಯಾದವ, ಪುರಸಭೆ ಮುಖ್ಯಾಧಿಕಾರಿ ನರಸರಡ್ಡಿ, ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಎಪಿಎಂಸಿ ಅಧ್ಯಕ್ಷ ಸಿದ್ದನಗೌಡ ಮಾಟೂರು, ಮೈಬುಸಾಬ ಮುದ್ದಾಪೂರು, ಪಂಪಾಪತಿ ಹೂಗಾರ, ರಾಚಯ್ಯ, ಗುರುಮೂರ್ತಿ, ಶರಣಪ್ಪ, ದಾವೂದ್, ಸಿಪಿಐ ರಾಮಣ್ಣ ಜಲಿಗೇರಿ ಸೇರಿದಂತೆ ದಲಿತ ಸಮಾಜದ ಮುಖಂಡರು, ಯುವಕರು, ವಿವಿಧ

**ಗ್ರಾಮೀಣ ಭಾಗದಲ್ಲಿ ಅಸ್ಪೃಶ್ಯತೆ ಇನ್ನು ಜೀವಂತ ಇದೆ. ಆದರೆ ಆದರ ಸ್ವರೂಪ ಬಸಲಾಗಿದೆ. ದೇಶದಲ್ಲಿ ಜಾತಿ ಯಾರಿಗೆ ವರವಾಗಿದೆ ಅಂತಹವರು ಜಾತಿಯನ್ನು ಬೆಳಸುತ್ತಿದ್ದಾರೆ.-ಆರ್ ಮಾನಸಯ್ಯ**

ಸರ್ವೆ ಮತ್ತು ಭೂ ದಾಖಲೆ ಇಲಾಖೆ, ಮಸ್ಕಿ ನಾಲಾ ಯೋಜನಾ ಕಛೇರಿ, ಶಾಸಕರ ಕಾರ್ಯಾಲಯ ಸೇರಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದ ಕಾರ್ಯಾಲಯ ಸೇರಿದಂತೆ ಇನ್ನಿತರ ಸರಕಾರಿ ಕಛೇರಿ, ಶಾಲಾ-ಕಾಲೇಜ್ ಡಾ. ಬಿ.ಆರ್.ಅಂಬೇಡ್ಕರ್ 135ನೇ ಜಯಂತಿಯನ್ನು ಆಚರಿಸಿದರು.

## ಡಾ.ಬಿ.ಆರ್. ಅಂಬೇಡ್ಕರ್ ಅವರ ಆದರ್ಶಗಳನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕು: ಶಾಸಕ ಡಾ.ಶಿವರಾಜ ಪಾಟೀಲ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಗತ್ತಿನ ಶ್ರೇಷ್ಠ ಜ್ಞಾನಿಯಾಗಿದ್ದ ಅಂಬೇಡ್ಕರ್ ಅವರು ತಮ್ಮ ಪ್ರತಿಭೆಯನ್ನು ಮನುಕುಲದ ಉದ್ಧಾರಕ್ಕಾಗಿ ಮುಡಿಪಾಗಿಟ್ಟರು. ಅವರ ಆದರ್ಶಗಳನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕೆಂದು ರಾಯಚೂರು ನಗರದ ಕ್ಷೇತ್ರದ ಶಾಸಕರಾದ ಡಾ.ಶಿವರಾಜ ಎಸ್.ಪಾಟೀಲ್ ಅವರು ಹೇಳಿದರು. ಏಪ್ರಿಲ್ 14ರ ಮಂಗಳವಾರ ದಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.**

ಜಗತ್ತಿನಲ್ಲಿ ಶಾಂತಿಯುತ, ಸಮೃದ್ಧಿಯಾಗಿ ಯಾವುದಾದರೂ ದೇಶ ಇದ್ದಾರೆ. ಅದು ಭಾರತ ದೇಶವಾಗಿದೆ. ಇದಕ್ಕೆ ಮೂಲಕಾರಣ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾರತ ಸಂವಿಧಾನವಾಗಿದೆ. ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಓದಬೇಕು. ವಿದ್ಯಾರ್ಥಿಗಳಿಗೆ ಡಾ.ಬಿ.ಆರ್. ಅಂಬೇಡ್ಕರ್ ಅವರು ಪ್ರೇರಣಿಯಾಗಬೇಕೆಂದರು.



ಪ್ರಭಾರಿ ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ವ್ಯಕ್ತಿತ್ವ ಬಹಳ ದೊಡ್ಡದಾಗಿತ್ತು. ಸಂವಿಧಾನ, ಕಾನೂನು, ಆರ್ಥಿಕ ವಿಷಯಗಳಲ್ಲಿ ತಂಜ್ಞರಾಗಿ ಮಾತ್ರವಲ್ಲದೇ ಪ್ರಪಂಚದ ಎಲ್ಲಾ ವಿಷಯಗಳಲ್ಲಿ ಪರಿಣಿತರಾಗಿದ್ದರು. ಪ್ರತಿಯೊಬ್ಬರೂ ಅವರ ತೋರಿಸಿದ ಮಾರ್ಗದಲ್ಲಿ ನಡೆಯಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು. ಕಾರ್ಯಕ್ರಮದ ಉಪನ್ಯಾಸಕರಾಗಿ ಕುವೆಂಪು ಕನ್ನಡ ಅಧ್ಯಯನ ಕುಪ್ಪಳ್ಳಿ ಮತ್ತು ಹಿರಿಯ ವಿದ್ವಾಂಸರಾದ ಡಾ.ಬಿ.ಎಂ.ಪುಟ್ಟಯ್ಯ ಅವರು ಮಾತನಾಡಿ, ಅಂಬೇಡ್ಕರ್ ಅವರ ಜಯಂತ್ಯೋತ್ಸವವನ್ನು ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯೋತ್ಸವ ಎನ್ನದೇ, ರಾಜಕೀಯ, ಸಂಸದೀಯ, ಪ್ರಜಾಪ್ರಭುತ್ವದ ದೃಷ್ಟಿಯಿಂದ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಜಯಂತ್ಯೋತ್ಸವ ಎಂದು ಕರೆಯಬೇಕು. ಅಂಬೇಡ್ಕರ್ ಸಂಶೋಧನಾ ಕೇಂದ್ರಗಳು, ಅಧ್ಯಯನ ಕೇಂದ್ರಗಳನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಕೇಂದ್ರಗಳೆಂದು ಉಲ್ಲೇಖಿಸಬೇಕು. ಮತ್ತು ಎಲ್ಲಾ ಖಾಸಗಿ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರವನ್ನು ಇರಿಸಬೇಕೆಂದರು.

ಸಂವಿಧಾನದಲ್ಲಿ ಬಡವ-ಶ್ರೀಮಂತ ಎನ್ನದೆ ದೇಶದ ಪ್ರತಿ ವ್ಯಕ್ತಿಗೆ ಒಂದೇ ಮತದ ಹಕ್ಕು ನೀಡಲಾಗಿದೆ. ಲಿಂಗ, ಜಾತಿ, ಧರ್ಮ, ಬಾಷೆ ಆಧಾರಿತ ತಾರತಮ್ಯ ಮಾಡುವಂತಿಲ್ಲ. ಇದು ಪ್ರಜಾಪ್ರಭುತ್ವದ ವೈಶಿಷ್ಟ್ಯ. ತಂದೆ, ಪತ್ನಿ, ಕೊನೆಗೆ ಮಕ್ಕಳನ್ನು ಕಳೆದುಕೊಂಡರು ಅಂಬೇಡ್ಕರವರು ಈ ದೇಶದ ದೀನ ದಲಿತರ, ಬಡವರ, ಅಲ್ಪಸಂಖ್ಯಾತರ, ದಮನಿತರಿಗೆ ನ್ಯಾಯ ಕಲ್ಪಿಸಲು ಜೀವನ ಪರ್ಯಂತ ಹೋರಾಡಿದ ಮಹಾನ್ ಹೋರಾಟಗಾರ ಎಂದು ಬಣ್ಣಿಸಿದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ: ದ್ವಿತೀಯ ಪಿಯುಸಿಯಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಾದ ಸ್ನೇಹ, ಸಂಗೀತಾ ಹಾಗೂ ಗೀತಾ ಅವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಅಂಗವಾಗಿ ವಿವಿಧ ಗಣ್ಯರಿಂದ ಸನ್ಮಾನಿಸಿ, ಗೌರವಿಸಲಾಯಿತು.

ವಿವಿಧ ಗಣ್ಯರಿಂದ ಛಾಯಾಚಿತ್ರ ವೀಕ್ಷಣೆ: ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಅಂಗವಾಗಿ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜೀವನ, ಹೋರಾಟ, ಸಾಧನೆ ಕುರಿತು ಅವರ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಛಾಯಾಚಿತ್ರಗಳನ್ನು ಜಿಲ್ಲಾಧಿಕಾರಿಗಳು, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ವಿವಿಧ ಗಣ್ಯರು, ಸಾರ್ವಜನಿಕರು ವೀಕ್ಷಣೆ ಮಾಡಿದರು. ಇದೇ ಸಂದರ್ಭದಲ್ಲಿ ಬೀದರ್ ಬುದ್ಧ ವಿಹಾರನ ಬಂತೆಜಿ ಯಾಕತ್ಪೂರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ್, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಪ್ರವೀಣ್ ಕುಮಾರ್, ಆದಿಜಾಂಭವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ರಾಜೇಂದ್ರ ಜಲ್ದಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜದ ಮುಖಂಡರು ಸಭೆಯಲ್ಲಿ ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.